# ಹಂಪಿ ಟೈಮ್ಸ್

HAMPI TIMES
KANNADA DAILY

ಕನ್ನಡ ದಿನಪತ್ರಿಕೆ


ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 264 Issue: 264 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 26.04.2025 • ಶನಿವಾರ Saturday • ಪುಟ:04 Page:04 • ಬೆಲೆ:2 Rs:2





Good Opportunity for Branding
1,25,000+
Digital E-PAPER READERS
No.1 HAMPI TIMES LEADING PRINT & DIGITAL District News Paper
Call Us for Advertisements: 9448633038


## ನಿನಗೆ ನೀನೇ ಬೆಳಕು

ಯಶಸ್ವಿಯಾಗುತ್ತೇನೆ ಎಂಬ ನಿರ್ಧಾರ ನಿಮ್ಮಲ್ಲಿ ಪ್ರಬಲವಾಗಿದ್ದರೆ ಸೋಲು ಎಂದಿಗೂ ನಿಮ್ಮನ್ನು ಹಿಮ್ಮೆಟ್ಟಿಸುವುದಿಲ್ಲ.
– ಎ.ಪಿ.ಜೆ.ಅಬ್ದುಲ್ ಕಲಾಂ

## ದೇವಾಲಯ ದರ್ಶನ




ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಆನಂದ ಬಾಣ

### ಚಿನ್ನದ ಬೆಲೆ ಗಗನಕ್ಕೆ




# ಉಗ್ರರ ಬೆಂಬಲಿಗರನ್ನೂ ಹುಡುಕಿ ಹೊಡೆಯಿರಿ

## ವಿಶ್ವ ಹಿಂದೂ ಪರಿಷತ್ ಆಗ್ರಹ | ಕಾಶ್ಮೀರದ ಪಹಲ್ಗಾಮದಲ್ಲಿ ಧರ್ಮ ಕೇಳಿ ಕೊಂದವರನ್ನು ಕೊನೆಗೊಳಿಸಿ ಹಿಂದುಗಳೆಲ್ಲರೂ ಒಗ್ಗಟ್ಟಾಗಿ ಎಂದ ಪ್ರತಿಭಟನಾಕಾರರು | ಉಗ್ರರ ಗುಂಡಿನ ದಾಳಿಯಲ್ಲಿ ಮೃತರಿಗೆ ಶ್ರದ್ಧಾಂಜಲಿ

■ ಹಂಪಿ ಟೈಮ್ಸ್ ಹೊಸಪೇಟೆ

ಕಾಶ್ಮೀರದ ಪಹಲ್ಗಾವ್‌ನಲ್ಲಿ ಮುಗ್ಧ ನಾಗರಿಕರ ಧರ್ಮ ಕೇಳಿ ಹಿಂದೂ ಎಂದಾಕ್ಷಣ ಗುಂಡಿಟ್ಟು ಕೊಂದ ಉಗ್ರರನ್ನು ಮತ್ತು ಉಗ್ರರನ್ನು ಬೆಂಬಲಿಸುವವರನ್ನೂ ಸರ್ಕಾರ ಹುಡುಕಿ ಹೊಡೆಯಬೇಕು ಎಂದು ವಿಶ್ವ ಹಿಂದೂ ಪರಿಷತ್ತು ಕಾರ್ಯಕರ್ತರು ಆಗ್ರಹಿಸಿದರು.

ನಗರದಲ್ಲಿ ಶುಕ್ರವಾರ ವಿಶ್ವಹಿಂದೂ ಪರಿಷತ್, ಬಜರಂಗದಳ, ಹಿಂದು ಜಾಗರಣ ವೇದಿಕೆ ಪಹಲ್ಗಾಮ ನರಮೇಧವನ್ನು ಖಂಡಿಸಿ ಉಗ್ರರ ವಿರುದ್ಧ ಘೋಷಣೆ ಕೂಗಿ, ಸರ್ಕಾರ ಹಿಂದೂಗಳ ರಕ್ಷಣೆಗೆ ಅಗತ್ಯ ಕ್ರಮವಹಿಸಬೇಕು ಎಂದು ಒತ್ತಾಯಿಸಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನಾಕಾರರು ಮಾತನಾಡಿ, ಮಿನಿ ಸ್ವಿಟ್ಜರ್ಲೆಂಡ್ ಎಂದೇ ಕರಯಲಾಗುವದ ಪಹಲ್ಗಾಮ್ ಜಮ್ಮು ಮತ್ತು ಕಾಶ್ಮೀರದ ಜನಪ್ರಿಯ ಪ್ರವಾಸಿ ತಾಣಕ್ಕೆ ಪ್ರತಿ ವರ್ಷ ಲಕ್ಷಾಂತರ ಜನರು ಭೇಟಿ ನೀಡುತ್ತಾರೆ. ಪ್ರವಾಸಿಗರಿಗೆ ಹೆಚ್ಚಿನ ರಕ್ಷಣೆ ಒದಗಿಸಬೇಕು. ಕೇಂದ್ರ ಸರ್ಕಾರ ಈಗಾಗಲೇ ರಾಜತಾಂತ್ರಿಕವಾಗಿ ಪಾಕಿಸ್ತಾನಕ್ಕೆ ಪೆಟ್ಟು ನೀಡಿದೆ. ಹಿಂದೂಗಳನ್ನೇ ಟಾರ್ಗೆಟ್ ಮಾಡಿಕೊಂಡಿರುವ ಉಗ್ರರ ಅಟ್ಟಹಾಸವನ್ನು ಕೊನೆಯಾಗಿಸಲು ಕಠಿಣ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿದರು.




ಇತ್ತೀಚೆಗೆ ವಕ್ಫ್ ಕಾಯಿದೆ ವಿರೋಧಿಸಿ ಪಶ್ಚಿಮ ಬಂಗಾಳದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ಹಲ್ಲೆಗಳಿಗೆ ಕಡಿವಾಣ ಹಾಕಬೇಕು. ಹಿಂದೂ ಮಠ ಮಂದಿರಗಳ ಆಸ್ತಿಯನ್ನು ರಕ್ಷಿಸಬೇಕು. ವಿಜಯನಗರ ಜಿಲ್ಲೆಯಲ್ಲಿ ಅನಧಿಕೃತ ಕಸಾಯಿಕಾನೆಗಳು ಕಾರ್ಯನಿರ್ವಹಿಸುತ್ತಿವೆ. ಗೋವುಗಳ ಕಳ್ಳಸಾಗಣೆಯೂ ನಡೆಯುತ್ತಿದೆ, ಪೊಲೀಸ್ ಇಲಾಖೆ ಸೂಕ್ತ ಕ್ರಮಕೈಗೊಳ್ಳಬೇಕು. ಪ್ರಾರ್ಥನ ಮಂದಿರಗಳ ಮೇಲಿನ ಧ್ವನಿವರ್ಧಕಗಳು ಸರ್ವೋಚ್ಚ ನ್ಯಾಯಾಲಯ ನಿಗದಿಪಡಿಸಿದ್ದ ಶಬ್ಧಕ್ಕಿಂತಲೂ ಅಧಿಕ ಕರ್ಕಶವಾಗಿಟ್ಟಿರುವುದರಿಂದ ಸಾರ್ವಜನಿಕರಿಗೆ ತೊಂದರೆಯುಂಟಾಗುತ್ತಿದೆ. ಕೂಡಲೇ ನ್ಯಾಯಾಲಯದ ಆದೇಶ ಪಾಲಿಸಬೇಕು ಎಂದು ಆಗ್ರಹಿಸಿದರು.

ವಿಶ್ವ ಹಿಂದೂ ಪರಿಷತ್‌ನ ಮುಖಂಡರಾದ ನರಸಿಂಹಮೂರ್ತಿ, ವಿಜಯಲಕ್ಷ್ಮಿ ಹಿರೇಮಠ, ಮೀರಾ ರಘುಪ್ರಸಾದ, ಕಮಲಾ, ರೇಣುಕಾ, ಉಮಾ, ಸಿದ್ದಮ್ಮ, ಚಂದ್ರಿಕಾ, ಭುವನೇಶ್ವರಿ, ಆನಂದ ಕೃಷ್ಣ, ತಿಪ್ಪೇಸ್ವಾಮಿ, ನಾಗಾರ್ಜುನ, ನಾಗರಾಜ, ಸುದರ್ಶನ, ರೇವಣಸಿದ್ದಪ್ಪ, ಕಿಚಿಡಿ ಕೊಟ್ರೇಶ್, ಮದುರಚೆನ್ನ ಶಾಸ್ತ್ರಿ, ಅಶೋಕ ಜೀರೆ, ಭೂಪಾಲ್ ಪ್ರಹ್ಲಾದ್, ರಮೇಶ ಗುಪ್ತ, ಜಗದೀಶ ಕಮತಿಗಿ, ಕಿರಣ್ ಶಂಕ್ರಿ, ಗೊಗ್ಗ ಚನ್ನಬಸವರಾಜ, ನಿರಂಜನ ಇತರರು ಇದ್ದರು,

ಅಭಯ ಆಂಜಿನೇಯ ದೇವಸ್ಥಾನದಿಂದ ವಾಲ್ಮೀಕಿ ವೃತ್ತ, ಎಪಿಎಂಸಿ, ಸಾಯಿಬಾಬ ದೇವಸ್ಥಾನ ಮಾರ್ಗವಾಗಿ ಜಿಲ್ಲಾಧಿಕಾರಿ ಕಚೇರಿಗೆ ಪ್ರತಿಭಟನಾಕಾರರು ತೆರಳಿ ಮನವಿ ಸಲ್ಲಿಸಿದರು.

# ವಸತಿ ಶಾಲೆ ವಿದ್ಯಾರ್ಥಿಗಳ ಪ್ರವೇಶ ಪತ್ರ ಡೌನ್ಲೋಡ್‌ಗೆ ಅವಕಾಶ

■ ಹಂಪಿ ಟೈಮ್ಸ್ ಹೊಸಪೇಟೆ

2025–26ನೇ ಶೈಕ್ಷಣಿಕ ಸಾಲಿನಲ್ಲಿ 6ನೇ ತರಗತಿ ಉಚಿತ ಪ್ರವೇಶಕ್ಕಾಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಸರ್ಕಾರಿ ಮುಸ್ಲಿಂ ವಸತಿ ಶಾಲೆ, ಡಾ.ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆಗಳಿಗೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರಗಳನ್ನು ಆನ್‌ಲೈನ್ ಮೂಲಕ ಪಡೆಯಬಹುದಾಗಿದೆ. ಪ್ರವೇಶ ಪತ್ರವನ್ನು ವೆಬ್‌ಸೈಟ್ http://dom.karnataka.gov.in ಗೆ ಭೇಟಿ ನೀಡಿ ಸ್ಯಾಟ್ಸ್ ಸಂಖ್ಯೆಯನ್ನು ನಮೂದಿಸಿ ಡೌನ್‌ಲೊಡ್ ಮಾಡಿಕೊಳ್ಳಬಹುದು. ಪ್ರವೇಶ ಪತ್ರ ಕುರಿತು ಯಾವುದೇ ಕುಂದುಕೊರತೆಗಳಿದ್ದಲ್ಲಿ ಜಿಲ್ಲಾ ಕಚೇರಿ, ಆಯಾ ತಾಲೂಕಿನ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳಿಗೆ ಭೇಟಿ ನೀಡುವಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಚಿಕ್ಕದೊಂದು ಜಾಹೀರಾತು
ನಿಮ್ಮ ವ್ಯಾಪಾರವನ್ನು
ವೃದ್ದಿಸಬಲ್ಲದು..!
ಜಾಹೀರಾತಿಗಾಗಿ ಸಂಪರ್ಕಿಸಿ
ಮೊ: 9448633038


# ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಿ ಡಾ.ಅಂಬೇಡ್ಕರ್ ಕನಸು ನನಸಾಗಿಸಿ

## ಡಿಎಸ್ಸೆಸ್ ಜಿಲ್ಲಾ ಸಂಚಾಲಕ ಎಸ್ ದುರುಗೇಶ್ ಹೇಳಿಕೆ | ಹೂಡೇಂನಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ



■ ಹಂಪಿ ಟೈಮ್ಸ್ ಕೂಡ್ಲಿಗಿ

ಪ್ರತಿಯೊಬ್ಬರಿಗೂ ಶಿಕ್ಷಣ ಸಿಗಬೇಕೆಂಬ ಡಾ.ಅಂಬೇಡ್ಕರ್ ಅವರ ಕನಸು ನನಸಾಗಲು ಪ್ರತಿಯೊಬ್ಬರು ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಬೇಕು ಎಂದು ಡಿಎಸ್ಸೆಸ್ ಜಿಲ್ಲಾ ಸಂಚಾಲಕ ಎಸ್ ದುರುಗೇಶ್ ಹೇಳಿದರು.

ತಾಲ್ಲೂಕಿನ ಹೂಡೇಂ ಗ್ರಾಮದ ಅಂಬೇಡ್ಕರ್ ಕಾಲೋನಿಯಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಗ್ರಾಮ ಶಾಖೆ ಶುಕ್ರವಾರ ಏರ್ಪಡಿಸಿದ ಡಾ. ಬಾಬಾ ಸಾಹೇಬ ಅಂಬೇಡ್ಕರ್ ಅವರ 134ನೇ ಜಯಂತೋತ್ಸವ ಉದ್ಘಾಟಿಸಿ ಮಾತನಾಡಿದರು. ಅಂಬೇಡ್ಕರ್ ಕೊಟ್ಟ ಸಂವಿಧಾನವನ್ನು ಉಳಿಸಲು ಪ್ರತಿಯೊಬ್ಬ ಮಕ್ಕಳಿಗೂ ಉತ್ತಮ ಶಿಕ್ಷಣ ಕೊಡಿಸಬೇಕು. ಆಗಮಾತ್ರ ದಲಿತರ ಅಭಿವೃದ್ಧಿ ಸಾಧ್ಯ. ಈ ನಿಟ್ಟಿನಲ್ಲಿ ಪಾಲಕರು ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಿ ಎಂದರು. ಒಳಮೀಸಲಾತಿ ಸಮೀಕ್ಷೆ 10 ದಿನಗಳ ಒಳಗೆ ಪ್ರಾರಂಭವಾಗಲಿದ್ದು ತಾಲೂಕಿನ ಎಲ್ಲಾ ಗ್ರಾಮಗಳಿಗೆ ಸಮೀಕ್ಷೆಯ ಅಧಿಕಾರಿಗಳು ಆಗಮಿಸಿದಾಗ ಪರಿಶಿಷ್ಟ ಜಾತಿಗಳ ಸಮೀಕ್ಷೆಗೆ ಸಹಕಾರ ನೀಡುವ ಕೆಲಸವಾಗಬೇಕು. ಪರಿಶಿಷ್ಟ ಜಾತಿಯ ಆದಿ ಜಾಂಬವ, ಆದಿ ದ್ರಾವಿಡ, ಎಸ್‌ಸಿ, ಆದಿ ಕರ್ನಾಟಕ ಹಾಗೂ ಹರಿಜನ ಪದಗಳನ್ನು ಬರಬಾರದು, ಜಾತಿ ಕಾಲಂನಲ್ಲಿ ಮಾದಿಗ ಎಂದು ಬರೆಯಿಸಬೇಕಾಗಿದೆ. ಈ ನಿಟ್ಟಿನಲ್ಲಿ ಸಮುದಾಯದ ಜನರಲ್ಲಿ ಜಾಗೃತಿ ಮೂಡಿಸಬೇಕಾಗಿದೆ. ಬೇರೆ ಪದಗಳನ್ನು ಬಳಸಿ ನಮಗೆ ಸಿಗಬಹುದಾಗ ಸೌಲಭ್ಯಗಳನ್ನು ಪಡೆಯುವ ಪ್ರಸಂಗಗಳು ಕಂಡು ಬರುತ್ತಿದೆ. ನಮ್ಮ ಸಮುದಾಯ ಸರ್ಕಾರಗಳ ಸೌಲಭ್ಯ ಪಡೆದು ಎಲ್ಲಾ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಬೇಕಾಗಿದೆ. ಅಧಿಕಾರಿಗಳು ಸಮೀಕ್ಷೆಗೆ ಬಂದಾಗ ಮಾದಿಗ ಎಂದು ನಮೂದಿಸಬೇಕು ಎಂದು ಕಿವಿಮಾತು ಹೇಳಿದರು.

ವಕೀಲ ಎಸ್ ಪರಮೇಶ್ ವಿಶೇಷ ಉಪನ್ಯಾಸದಲ್ಲಿ ಮಾತನಾಡಿ, ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಹೆಣ್ಣು ಮಕ್ಕಳಿಗೆ ಪಿತ್ರಾರ್ಜಿತ ಆಸ್ತಿ ಪಾಲು ಸಿಗುವಂತೆ ಮತ್ತು ಮತದಾನದಲ್ಲಿ ಹಕ್ಕು ಸಿಗುವಂತೆ ಕಾನೂನು ರೂಪಿಸಿದರು. ಸಮಾಜವನ್ನು ನಿರಂತರವಾದ ಪರಿವರ್ತನೆಯೆಡೆಗೆ ಕೊಂಡೊಯ್ಯುವುದು ನಮ್ಮ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಬುದ್ಧ ಬಸವ, ಹಾಗೂ ಅಂಬೇಡ್ಕರ್ ರವರ >>4

# ಮಳೆಗೆ ಪಪ್ಪಾಯಿ ಬೆಳೆ ಹಾನಿ ಪರಿಶೀಲನೆ

## ಎಸಿ ಚಿದಾನಂದ ಎಸ್.ಜಿ.ಭೇಟಿ | ರೈತರಿಂದ ಮಾಹಿತಿ ಸಂಗ್ರಹ

■ ಹಂಪಿ ಟೈಮ್ಸ್ ಕೊಟ್ಟೂರು.

ಹರಪನಹಳ್ಳಿಯ ಸಹಾಯಕ ಆಯುಕ್ತ ಚಿದಾನಂದ.ಎಸ್. ಗುರುಸ್ವಾಮಿ ಅವರು ಶುಕ್ರವಾರ ತಾಲೂಕಿನ ಕಂದಗಲ್ಲು ಗ್ರಾಮಕ್ಕೆ ಭೇಟಿ ನೀಡಿ ಹಾನಿಯಾದ ಪಪ್ಪಾಯಿ ಬೆಳೆಯ ನಷ್ಟದ ಬಗ್ಗೆ ಮಾಹಿತಿ ಪಡೆದರು.

ಕೊಟ್ಟೂರು ತಾಲೂಕಿನಲ್ಲಿ ಏ– 16 ರಂದು ಸುರಿದ ಭಾರೀ ಗಾಳಿ, ಮಳೆಗೆ ಕಂದಗಲ್ ಗ್ರಾಮದ ಕೆ.ನಂಜಪ್ಪ ತಂದೆ ಸೋಗೀರಪ್ಪ ಇವರ ಸ ನಂ 198/2 ವಿಸ್ತೀರ್ಣ 0.60 ಸೆಂಟ್ಸ್ ಹಾಗೂ ಎಂ ಚಂದ್ರಪ್ಪ ಸ ನಂ 193 ವಿಸ್ತೀರ್ಣ 3.00 ಎಕರೆ ಜಮೀನುಗಳಲ್ಲಿ ಬೆಳೆದ ಪಪ್ಪಾಯಿ ಬೆಳೆ ಭಾಗಶ: ಹಾಳಾಗಿದ್ದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಸಂಪೂರ್ಣ ಮಾಹಿತಿ ಪಡೆದರು.

ಈ ಸಮಯದಲ್ಲಿ ಕೊಟ್ಟೂರು ತಹಶೀಲ್ದಾರರಾದ ಅಮರೇಶ್ ಜಿ ಕೆ, ಕಂದಾಯ ನಿರೀಕ್ಷಕರಾದ ಹಾಲಸ್ವಾಮಿ, ಗ್ರಾಮ ಆಡಳಿತ ಅಧಿಕಾರಿ ಸೌಭಾಗ್ಯಮ್ಮ ಹಾಗೂ ಜಮೀನಿನ ರೈತರು ಸ್ಥಳದಲ್ಲಿ ಹಾಜರಿದ್ದರು.




ಪ್ರತಿ ಭಾನುವಾರ ಹಂಪಿ ಟೈಮ್ಸ್ ವರ್ಣರಂಜಿತ ಜಾಹೀರಾತು ಪುರವಣಿ!
ಸ್ಥಳೀಯ ಉದ್ದಿಮೆದಾರರಿಗೆ, ವ್ಯಾಪಾರಸ್ಥರಿಗೆ ವಿಶೇಷ ಅವಕಾಶ!
E-PAPER USER ENGAGEMENT 1,50,000+
ನಿಮ್ಮ ಸಂಸ್ಥೆಯ ಉತ್ಪನ್ನ, ಮಾರಾಟ / ಸೇವೆ ಪ್ರಚಾರಕ್ಕಾಗಿ 'ಹಂಪಿ ಟೈಮ್ಸ್'
ನಿಮಗಾಗಿ ತರಲಿದೆ ವಿಶೇಷ ಜಾಹೀರಾತು ಪುಟಗಳು ಮತ್ತು ಮಾರುಕಟ್ಟೆ ಪುರವಣಿ!
ನಂ.1 ಜಿಲ್ಲಾಮಟ್ಟದ ದಿನಪತ್ರಿಕೆ
ಕಡಿಮೆ ಖರ್ಚು
ಹೆಚ್ಚು ಕವರೇಜ್
ವಿನ್ಯಾಸದ ಬಣ್ಣದ ಪುಟಗಳು
ನೇರವಾಗಿ ಸ್ಥಳೀಯ ಗ್ರಾಹಕರಿಗೆ ತಲುಪುವ ಭರವಸೆ!
Print and Digital Edition
HAMPI TIMES SPL OFFER
SHINE SUNDAY
UP TO 50 % OFF
LIMITED TIME ONLY
HOSAPETE-VIJAYANAGARA DIST.
Contact Us 9448633038
ಹಂಪಿ ಟೈಮ್ಸ್

# ನಾವಿನ್ಯತೆಯೇ ಬೌದ್ಧಿಕ ಆಸ್ತಿಯ ಬುನಾದಿ

■ ರಾಜು. ಭೂಶೆಟ್ಟಿ, ಹುಬ್ಬಳ್ಳಿ



ಒಬ್ಬ ವ್ಯಕ್ತಿಯು ತನ್ನ ಜೀವನ ನಿರ್ವಹಣೆಯ ಜೊತೆಗೆ ತನ್ನ ಮುಂದಿನ ಪೀಳಿಗೆಯು ಸುಖಕರವಾದ ಜೀವನವನ್ನು ನಡೆಸಬೇಕೆಂಬ ಉದ್ದೇಶದಿಂದ ಮನೆ, ಜಮೀನು, ಚಿನ್ನ, ಬೆಳ್ಳಿಯ ರೂಪದಲ್ಲಿ ಭೌತಿಕವಾಗಿ ಆಸ್ತಿಯನ್ನು ಮಾಡುವತ್ತ ಗಮನಹರಿಸುತ್ತಾನೆ. ಭೌತಿಕ ಆಸ್ತಿಕ್ಕಿಂತಲೂ ಹೆಚ್ಚು ಮಹತ್ವವಾದ ಇನ್ನೊಂದು ಪ್ರಕಾರದ ಆಸ್ತಿಯೆಂದರೆ ಅದು ಬೌದ್ಧಿಕ ಆಸ್ತಿಯಾಗಿದೆ. ಆದರೆ ತುಂಬಾ ಜನರಿಗೆ ಬೌದ್ಧಿಕ ಆಸ್ತಿಯ ಕುರಿತು ತಿಳುವಳಿಕೆ ಕಡಿಮೆ ಎಂದು ಹೇಳಬಹುದು. ಇತ್ತೀಚಿನ ದಿನಗಳಲ್ಲಿ ಭೌತಿಕವಾಗಿ ಸಂಪಾದಿಸಿದ ಆಸ್ತಿಗಾಗಿ ಜಗಳ ನಡೆಯುವುದು ಸರ್ವೆ ಸಾಮಾನ್ಯ ಎಂಬಂತಾಗಿದೆ. ಅಂದರೆ ಈ ಆಸ್ತಿಯನ್ನು ಯಾರಾದರೂ ಕಸಿದುಕೊಳ್ಳಬಹುದು ಅಥವಾ ಮೋಸ ಮಾಡಬಹುದು. ಆದರೆ ಬೌದ್ಧಿಕ ಆಸ್ತಿಗಾಗಿ ಜಗಳ ನಡೆಯುವುದು ಅತೀ ವಿರಳವೆಂದೇ ಹೇಳಬಹುದು. ವ್ಯಕ್ತಿಯೊಬ್ಬನ ಬೌದ್ಧಿಕ ಆಸ್ತಿಯನ್ನು ಯಾರೂ ಕಸಿದುಕೊಳ್ಳಲು ಬಾರದು. ಅಷ್ಟೇ ಅಲ್ಲ, ಇದು ಭೌತಿಕ ಆಸ್ತಿಯಂತೆ ನಶಿಸಿ ಹೋಗುವುದಿಲ್ಲ. ಒಮ್ಮೆ ಸೃಷ್ಟಿಯಾದರೆ ಮುಗಿಯಿತು, ಸೃಷ್ಟಿಸಿದ ವ್ಯಕ್ತಿಯ ಮರಣದ ನಂತರವೂ ಕೂಡ ಅವನ ಬೌದ್ಧಿಕ ಆಸ್ತಿ ಜೀವಂತವಾಗಿರುತ್ತದೆ ಎಂದು ಹೇಳಬಹುದು. ಒಟ್ಟಾರೆಯಾಗಿಬೌದ್ಧಿಕಆಸ್ತಿಯುವ್ಯಕ್ತಿಯೊಬ್ಬನಜ್ಞಾನಕ್ಕೆಸಂಬಂಧಿಸಿದುದಾಗಿದೆ. ಅಂದರೆ ವ್ಯಕ್ತಿಯೊಬ್ಬರು ತಮ್ಮ ಸ್ವಂತ ಜ್ಞಾನದಿಂದಲೇ ಬರಹಗಾರನಾಗಿ, ಕವಿ, ವಿಜ್ಞಾನಿಯಾಗಿ ಅನೇಕ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ವಿವಿಧ ಪುಸ್ತಕಗಳನ್ನಾಗಲಿ, ಕಥೆ, ಕವಿತೆ ರಚನೆ, ಸಂಗೀತ, ಸಾಹಿತ್ಯ ರಚನೆ, ವರ್ಣಚಿತ್ರ, ಛಾಯಾಚಿತ್ರ, ಧ್ವನಿ, ನಾಟಕ, ವಾಸ್ತುಶಿಲ್ಪ, ಚಲನಚಿತ್ರ, ಕಂಪ್ಯೂಟರ್ ಪ್ರೋಗ್ರಾಮಿಂಗ್ ಮೊದಲಾದವುಗಳನ್ನು ಮಾಡಿದಾಗ ಅದು ಆ ವ್ಯಕ್ತಿಯ ಬೌದ್ಧಿಕ ಆಸ್ತಿಯೆನಿಸಿಕೊಳ್ಳುತ್ತದೆ. ಅಂದರೆ ಇದು ಆ ವ್ಯಕ್ತಿಯ ಸ್ವಂತ ಜ್ಞಾನದಿಂದ ತಯಾರಾಗಿರುವುದರಿಂದ ಪೇಟೆಂಟ್, ಕಾಫಿರೈಟ್, ಟ್ರೇಡ್ ಮಾರ್ಕ ಹೀಗೆ ನಾನಾ ರೀತಿಯ ಹೆಸರಿನಲ್ಲಿ ರಕ್ಷಿಸಲ್ಪಡುತ್ತದೆ. ಜೊತೆಗೆ ಮೂಲ ವ್ಯಕ್ತಿಯೇ ವಾರಸುದಾರ ಎನಿಸಿಕೊಳ್ಳುತ್ತಾನೆ. ಕಾರಣ ಆ ವ್ಯಕ್ತಿಯ ಅನುಮತಿಯಿಲ್ಲದೇ ಅವರ ಸಾಹಿತ್ಯದಿಂದ ಯಾವುದೇ ವಿಚಾರಗಳನ್ನು ಬಳಕೆಮಾಡಿಕೊಳ್ಳುವಂತಿಲ್ಲ.ಕಾಪಿರೈಟ್‌ಬೇರೆಯವರಿಗೆವರ್ಗಾಯಿಸುವವರೆಗೆ ಆ ಹಕ್ಕು ಅವರದೇ ಆಗಿರುತ್ತದೆ. ಬೌದ್ಧಿಕ ಆಸ್ತಿಯ ಮಹತ್ವ ಮತ್ತು ಸಂರಕ್ಷಣೆಗೆ ಜಾಗತಿಕ ಮಾನ್ಯತೆ ತಂದುಕೊಡುವ ಉದ್ದೇಶದಿಂದ ಪ್ರತಿ ವರ್ಷ ಏಪ್ರಿಲ್–26 ರಂದು ವಿಶ್ವ ಬೌದ್ಧಿಕ ಆಸ್ತಿ ದಿನವೆಂದು ಜಗತ್ತಿನಾದ್ಯಂತ ಆಚರಿಸಲಾಗುತ್ತದೆ. ಪ್ರತಿ ವರ್ಷ ಒಂದು ನಿರ್ದಿಷ್ಟ ಥೀಮ್‌ನೊಂದಿಗೆ ಆಚರಿಸಲಾಗುವ ಈ ದಿನವನ್ನು ಈ ವರ್ಷ ಐಪಿ ಆ್ಯಂಡ್ ಮ್ಯೂಸಿಕ್: ಫೀಲ್ ದಿ ಬೀಟ್ ಆಫ್ ಐಪಿ ಅಂದರೆ ಬೌದ್ಧಿಕ ಆಸ್ತಿ ಮತ್ತು ಸಂಗೀತ: ಬೌದ್ಧಿಕ ಆಸ್ತಿಯ ಬಡಿತವನ್ನು ಅನುಭವಿಸಿ ಎಂಬ ಥೀಮ್‌ನೊಂದಿಗೆ ಆಚರಿಸಲಾಗುತ್ತಿದೆ.

ಈ ಥೀಮ್ ಅಭಿವೃದ್ಧಿ ಹೊಂದುತ್ತಿರುವ ಸಂಗೀತ ಕ್ಷೇತ್ರವನ್ನು ಬೆಂಬಲಿಸುವಲ್ಲಿ ಬೌದ್ಧಿಕ ಆಸ್ತಿಯ ಮಹತ್ವವನ್ನು ಎತ್ತಿ ತೋರಿಸುತ್ತದೆ ಮತ್ತು ಸೃಜನಶೀಲತೆಯ ಸಾರ್ವತ್ರಿಕ ಭಾಷೆಯಾಗಿ ಸಂಗೀತದ ಪಾತ್ರವನ್ನು ಪ್ರದರ್ಶಿಸುತ್ತದೆ. ಈ ಅಭಿಯಾನವು ಸಂಗೀತದ ಜಗತ್ತಿಗೆ ಶಕ್ತಿ ತುಂಬುವ ಸೃಜನಶೀಲತೆ ಮತ್ತು ನಾವೀನ್ಯತೆಯನ್ನು ಬೌದ್ಧಿಕ ಆಸ್ತಿಯ ಹಕ್ಕುಗಳು ಹೇಗೆ ರಕ್ಷಿಸುತ್ತವೆ ಮತ್ತು ಉತ್ತೇಜಿಸುತ್ತವೆ ಎಂಬುದನ್ನು ತೋರ್ಪಡಿಸುತ್ತದೆ.

ಯಾವುದೇ ಒಬ್ಬ ವ್ಯಕ್ತಿಯು ಭೌತಿಕ ಆಸ್ತಿಯನ್ನು ಸಂಪಾದಿಸಲು ಎಷ್ಟೊಂದು ಶ್ರಮಪಟ್ಟಿರುತ್ತಾನೋ, ಅದಕ್ಕಿಂತಲೂ ಹೆಚ್ಚು ಶ್ರಮವನ್ನು ಸಮಯ, ಹಣ, ಸೃಜನಾತ್ಮಕತೆಯ ರೂಪದಲ್ಲಿ ಬೌದ್ಧಿಕ ಆಸ್ತಿ ಸಂಗ್ರಹಣೆಗೂ ಹೂಡಿಕೆ ಮಾಡಿರುತ್ತಾನೆ ಎಂಬುದು ಗಮನಿಸಬೇಕಾದ ಬಹು ಮುಖ್ಯ ಅಂಶವಾಗಿದೆ. ಈ ಕಾರಣಕ್ಕಾಗಿಯೇ ವ್ಯಕ್ತಿಯೊಬ್ಬರ ಸ್ವಂತ ಜ್ಞಾನದಿಂದ ತಯಾರಾದ ಯಾವುದೇ ಪ್ರಕಾರದ ಸಾಹಿತ್ಯವನ್ನು ಅಕ್ರಮ ಮಾರ್ಗದಿಂದ ಬಳಸಿಕೊಂಡು ತಮ್ಮ ಹೆಸರಿನಲ್ಲಿ ಪ್ರಕಟಿಸುವುದು, ನಕಲು ಮಾಡುವುದು, ಮಾರಾಟ ಮಾಡುವುದು ತಪ್ಪು ಎಂಬುದನ್ನು ಅರಿತುಕೊಳ್ಳಬೇಕಿದೆ. ಇಂಟರ್‌ನೆಟ್ ಅಥವಾ ಯು–ಟ್ಯೂಬ್‌ನಲ್ಲಿ ಉಚಿತವಾಗಿ ಬಳಸಿಕೊಳ್ಳಬಹುದಾದ ಅಂಶಗಳು ಹಾಗೂ ಕೆಲವುಗಳನ್ನು ಅನುಮತಿ ಯೊಂದಿಗೆ ಬಳಸಿಕೊಳ್ಳುವ ಅಂಶಗಳು ಎಂದು ನಮೂದಿಸಲ್ಪಟ್ಟಿರುತ್ತದೆ. ಅಂತಹ ಸಂದರ್ಭಗಳಲ್ಲಿ ಅಲ್ಲಿ ಉಲ್ಲೇಖವಾಗಿರುವ ಅಂಶಗಳನ್ನು ಗಮನಿಸಿ ಡೌನ್‌ಲೋಡ್ ಮಾಡಿಕೊಳ್ಳಬೇಕಾಗುತ್ತದೆ. ಇಂದು ವಿಶ್ವವನ್ನು ಜ್ಞಾನವು ಆಳುತ್ತಿರುವುದರಿಂದ ಈ ಜ್ಞಾನಕ್ಕೆ ಜಗತ್ತಿನಾದ್ಯಂತ ಬೇಡಿಕೆ ಇದೆ. ಹೀಗಾಗಿ ಭೌದ್ಧಿಕ ಆಸ್ತಿಯನ್ನು ಹೆಚ್ಚಿಸಿಕೊಳ್ಳಬೇಕೆಂದರೆ ಅನುಕರಣೆ ಮಾಡುವುದನ್ನು ಮೊದಲು ನಿಲ್ಲಿಸಬೇಕು. ಆವಿಷ್ಕಾರ ಮನೋಭಾವ, ಸಮಸ್ಯೆ ಪರಿಹರಿಸುವ ಸಾಮರ್ಥ್ಯ, ತಾರ್ಕಿಕ ಚಿಂತನೆ, ಸೃಜನಾತ್ಮಕತೆಗೆ ಹೆಚ್ಚಿನ ಒತ್ತು ನೀಡಬೇಕಿದೆ. ಜಾಗತಿಕ ಮಟ್ಟದಲ್ಲಿ ಯಾವ ರೀತಿಯ ಬದಲಾವಣೆಗಳಾಗುತ್ತಿವೆ? ಅವು ನಮ್ಮಿಂದ ಏನನ್ನು ನಿರೀಕ್ಷಿಸುತ್ತಿವೆ? ಅದಕ್ಕೆ ತಕ್ಕಂತೆ ನಮ್ಮನ್ನು ನಾವು ಅಪ್‌ಡೇಟ್ ಮಾಡಿಕೊಳ್ಳುತ್ತಾ ಸಾಗುವುದು ಕೂಡ ಬೌದ್ಧಿಕ ಆಸ್ತಿಗೆ ಕೊಡುಗೆಯಾಗಬಲ್ಲದು.

ಒಟ್ಟಾರೆಯಾಗಿ ವ್ಯಕ್ತಿಯೊಬ್ಬರ ಸ್ವಂತಿಕೆಯನ್ನು ಪ್ರೋತ್ಸಾಹಿಸುವುದರ ಜೊತೆಗೆ ಗೌರವಿಸುವ ಮೂಲಕ ಅವರ ಬೌದ್ಧಿಕ ಆಸ್ತಿಯನ್ನು ಹೆಚ್ಚಿಸಿಕೊಳ್ಳಲು ಕಾರಣರಾಗೋಣ. ಜಾಗತಿಕ ಸಮಸ್ಯೆಗಳಿಗೆ ಅಗತ್ಯವಿರುವ ಜ್ಞಾನ ಭಂಡಾರವನ್ನು ಎಲ್ಲ ರಾಷ್ಟ್ರಗಳು ಕೈ ಜೋಡಿಸಿ ನಿರ್ಮಿಸಬೇಕಿದೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಮರೆಯಲಾಗದ ಕರಾಳ ದಿನ

■ ಚೇತನ ಭಾರ್ಗವ, ಬೆಂಗಳೂರು



ಕಾಶ್ಮೀರ ಎಂದರೆ ನೆನಪಾಗುವುದೇ ಅಲ್ಲಿನ ಪ್ರಕೃತಿಯ ಸೌಂದರ್ಯ. ಇದು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತದೆ. ಇದೇ ಕಾರಣಕ್ಕೆ ಜಮ್ಮು ಕಾಶ್ಮೀರವನ್ನು ಪ್ರವಾಸಿಗರ ಪಾಲಿನ ಸ್ವರ್ಗವೆಂದೇ ಕರೆಯಲಾಗುತ್ತದೆ. ಇಲ್ಲಿನ ಹಿಮಾಚ್ಛಾದಿತ ಸುಂದರ ಪರ್ವತ ಶ್ರೇಣಿಗಳು ತಿಳಿ ನೀರಿನ ಸರೋವರಗಳು ಕಣಿವೆಗಳು ಪ್ರವಾಸಿಗರನ್ನು ಮೂಕವಿಸ್ಮಿತರಾಗಿಸುತ್ತದೆ. ಹಾಗಾಗಿಯೇ ಕಾಶ್ಮೀರ ವನ್ನು ಮಿನಿ ಸ್ವಿಡ್ಜರ್ಲ್ಯಾಂಡ್ ಎಂದು ಹೇಳಲಾ ಗುತ್ತದೆ. ಮನಸ್ಸಿಗೆ ಮುದ ನೀಡುವ ಬದುಕಿನ ಎಲ್ಲಾ ಜಂಜಾಟವನ್ನು ಮರೆಸುವಂತಹ ನೈಸರ್ಗಿಕ ಸೌಂದರ್ಯವೇ ಪ್ರವಾಸಿಗರಿಗೆ ಆಕರ್ಷಣೀಯ. ಅಲ್ಲದೆ ಜಮ್ಮು ಮತ್ತು ಕಾಶ್ಮೀರ ಭಾರತದ ಅವಿಭಾಜ್ಯ ಅಂಗಗಳಲ್ಲೊಂದು. ಚಳಿಗಾಲವಿಡಿ ಮಂಜು ಮುಸುಕಿರುವ ಇಲ್ಲಿ ಪ್ರವಾಸ ಉದ್ಯಮವೇ ಆರ್ಥಿಕತೆಯ ಬೆನ್ನೆಲುಬು. ಪ್ರವಾಸ ಅಷ್ಟೇ ಅಲ್ಲದೆ ಭಕ್ತಾದಿಗಳು ವೈಷ್ಣೋದೇವಿ ಹಾಗೂ ಅಮರನಾಥ ಯಾತ್ರೆಯನ್ನು ಹಾಗೂ ಶಂಕರಾಚಾರ್ಯರ ಸರ್ವಜ್ಞ ಪೀಠವನ್ನು ನೋಡಲು ಸಾವಿರಾರು ಸಂಖ್ಯೆಯಲ್ಲಿ ಭೇಟಿ ನೀಡುತ್ತಾರೆ. ಪ್ರತಿಯೊಬ್ಬ ಭಾರತೀಯನು ಜೀವನದಲ್ಲಿ ಒಮ್ಮೆಯಾದರೂ ಕಾಶ್ಮೀರಕ್ಕೆ ಭೇಟಿ ನೀಡುವ ಆಸೆ ಹೊಂದಿರುವುದು ಸುಳ್ಳಲ್ಲ.

ಆದರೆ ಏಪ್ರಿಲ್ 22ರ ಮಧ್ಯಾಹ್ನ ತಮ್ಮ ಕನಸಿನ ತಾಣವನ್ನು ಕಣ್ತುಂಬಿ ಕೊಳ್ಳುತ್ತಾ, ಭಾವಚಿತ್ರಗಳನ್ನು ಅಲ್ಲಿಯ ವೇಷ ಭೂಷಣಗಳನ್ನು ಧರಿಸಿ ಚಂದದ ಕ್ಷಣಗಳನ್ನು ಸೆರೆ ಹಿಡಿಯುತ್ತಾ, ಮೈ ಮರೆತಿದ್ದ ಪ್ರವಾಸಿಗರ ಮೇಲೆ ಪೆಹಲ್ಗಾಮ್‌ನಲ್ಲಿ 28 ಜನರ ಮೇಲೆ ಅದರಲ್ಲೂ ಗಂಡಸರ ಮೇಲೆ ಭಯೋತ್ಪಾದಕರು ಗುಂಡು ಹಾರಿಸಿ ದುಷ್ಕೃತ್ಯ ಮೆರೆದಿದ್ದಾರೆ. ಪುಲ್ವಾಮಾದ ನಂತರ ನಡೆದ ಭೀಕರ ಧಾಳಿಗಳಲ್ಲೊಂದಾಗಿದೆ ಪೆಹೆಲ್ಗಾಮ್ ನರಮೇಧ.

ಈ ದಿನವನ್ನು ಭಾರತೀಯರು ಅದರಲ್ಲೂ ಹಿಂದುಗಳು ಅದಲ್ಲದೆ ಮಾನವೀಯತೆ ಇರುವ ಎಲ್ಲಾ ಮನುಷ್ಯರು ಮರೆಯಲು ಸಾಧ್ಯವಿಲ್ಲ. ಇದರ ಮೂಲಕ ಆರ್ಟಿಕಲ್ 370ರ ನಂತರ ಶಾಂತಿಯಿಂದ ಕಾಶ್ಮೀರ ಕೊಳ್ಳ ಮತ್ತೆ ತನ್ನ ರಕ್ತ ಸಿಕ್ತ ಇತಿಹಾಸವನ್ನು ಮರುಕಳಿಸಿದೆ. ಎಲ್ಲಾ ಸರಿಯಾಗಿ ಶಾಂತಿ ನೆಲೆಸಿದೆ ಎನ್ನುವಷ್ಟರಲ್ಲಿ



ಉಗ್ರರ ಅಟ್ಟಹಾಸ ಮತ್ತೆ ಮೆರೆದಿದೆ. ಭಾರತೀಯರ ಪಾಲಿಗೆ ಇದು ಮರೆಯದ ಕರಾಳ ದಿನ.

ಕಾಶ್ಮೀರದ ಸೌಂದರ್ಯ ಸವಿಯುತ್ತಿದ್ದ ಪ್ರವಾಸಿಗರನ್ನು ಅದರಲ್ಲೂ ಧರ್ಮವನ್ನು ಕೇಳಿ ಹಿಂದೂ ಎಂದೊಡನೆ ಗಂಡಸರನ್ನೇ ಗುರಿ ಯಾಗಿಸಿ ಗುಂಡು ಹಾರಿಸಿ ಹತ್ಯೆಗೆಯ್ದಿರುವ ಭಯೋತ್ಪಾದಕರ ಅಟ್ಟಹಾಸ ಕಾಶ್ಮೀರ ಕೊಳ್ಳದ ಶಾಂತಿ ಕದಡಿದೆ. ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡ ಒಬ್ಬೊಬ್ಬರದು ಒಂದೊಂದು ಕರುಣಾಜನಕ ಕಥೆಯನ್ನು ತೆರೆದಿಟ್ಟಿದೆ. ಶಿವಮೊಗ್ಗ ಮೂಲದ ಮಂಜುನಾಥ್ ಅವರ ಪ್ರಾಣ ತೆಗೆದ ಭಯೋತ್ಪಾದಕರು ತಮ್ಮನ್ನು ಕೊಂದುಬಿಡಿ ಎಂದು ಕೇಳಿದ ಅವರ ಹೆಂಡತಿ ಮಗನನ್ನು ಕುರಿತು ಮೋದಿಗೆ ಹೇಳು ಹೋಗು ಎಂಬ ಅಸಡ್ಡೆ ಮಾತನ್ನು ಹೇಳಿ ಹೋಗಿದ್ದಾರೆ. ಇದರಲ್ಲೇ ಅವರ ಭಾರತ ದ್ವೇಷ ಹಾಗೂ ಕೇಂದ್ರ ಸರಕಾರದ ಕ್ರಮಗಳ ಮೇಲಿನ ದ್ವೇಷ ಭಾವನೆ ಎದ್ದು ಕಾಣುತ್ತದೆ. ಧರ್ಮದ ಅಂಧಕಾರದಲ್ಲಿ ಮುಳು ಬೀಳುತ್ತಿರುವ ಕಾಶ್ಮೀರ ಮೂಲದ ಪಾಕಿಸ್ತಾನಿಗಳು ನಿಸ್ಸಹಾಯಕ ಪ್ರವಾಸಿಗರನ್ನು ಗುರಿಯಾಗಿಸಿ ತನ್ಮೂಲಕ ಕಣಿವೆಯಲ್ಲಿ ಮತ್ತೆ ಭಯ ಹುಟ್ಟಿಸುವ ಕೆಲಸ ಮಾಡಿದ್ದಾರೆ. ವಾರದ ಹಿಂದಷ್ಟೇ, ಹುಟ್ಟು ಹಬ್ಬ ಆಚರಿಸಿದ್ದ ಮತ್ತಿಕೆರೆ ನಿವಾಸಿ ಭರತ್ ಭೂಷಣ್ ತಾನು ಹಿಂದು ಎಂದೊಡನೆ ಹಣೆಗೆ ಗುಂಡು ತಿಂದು ಧರಾಶಾಯಿ ಯಾದಾಗ ಅವರ ಪತ್ನಿ ಹಾಗೂ ಮೂರುವರುಷದ ಕಂದಮ್ಮ ಗೆ ಹೇಗಾಗಿರಬೇಡ, ಆ ಮಗುವನ್ನು ಬಿಗಿದಪ್ಪಿ ತಾಯಿ ಆ ಆಘಾತದಲ್ಲೂ ಜೀವ ಹಿಡಿದು ವಾಪಸ್ ಆಗಿದ್ದಾರೆ.

ಏಪ್ರಿಲ್ 16ರಂದು ವಿವಾಹವಾಗಿ 19ರಂದು ಅದ್ದೂರಿಯಾಗಿ ಆರತಕ್ಷತೆ ಮಾಡಿಕೊಂಡ ಲೆಫ್ಟಿನೆಂಟ್ ವಿನಯ್ ದಂಪತಿಗಳು ತಮ್ಮ ಬಾಳಿನ ಮೊದಲ ಪುಟವನ್ನು ಸುಂದರ ಅಕ್ಷರಗಳಲ್ಲಿ ಸವಿ ನೆನಪಿನಿಂದ ಬರೆದಿಡುವ ಸಲುವಾಗಿ ಪ್ರೇಮ ಕಾಶ್ಮೀರಕ್ಕೆ ಹೋದ ಈ ನವಜೋಡಿಗೆ ಮದರಂಗಿಯ ಬಣ್ಣ ಮಾಸುವ ಮೊದಲೇ ಪತಿಯನ್ನು ಕಳೆದುಕೊಂಡ ವಿನಯ್ ಅವರ ಪತ್ನಿಯ ಆಕ್ರಂದನ ದೇಶದ ಎಲ್ಲರ ಜನರ ಹೃದಯ ತಟ್ಟಿರದು ಸುಳ್ಳಲ್ಲ. ಪತಿಯ ಶವಾಪಟ್ಟಿಗೆ ಮುಂದೆ ಜೈ ಹಿಂದ್ ಎಂದು ಹೇಳಿ ಕಣ್ಣೊರೆಸಿಕೊಳ್ಳುತ್ತಿದ್ದ ಆಕೆಯ ದುಃಖ ಎಲ್ಲರ ಮನ ಮಿಡಿಯುತ್ತಿತ್ತು.

ಧರ್ಮದ ಅಂಧಶ್ರದ್ಧೆ, ಮಾನವೀಯತೆಯನ್ನೇ ಮರೆಸುವುದನ್ನು ಈ ಉಗ್ರವಾದದಲ್ಲಿ ಕಣ್ಣಾರೆ ಕಾಣಬಹುದು ಒಟ್ಟಿನಲ್ಲಿ 22ನೇ ಏಪ್ರಿಲ್ ದೇಶಾಭಿಮಾನವುಳ್ಳ ಭಾರತೀಯರ ಪಾಲಿಗೆ ಮರೆಯಲಾರದ ದುರ್ದಿನ ಇದನ್ನು ನೆನಪಿಟ್ಟು ಕೊಂಡು ಉಗ್ರವಾದದ ನಿರ್ಮೂಲನೆಗೆ ಪಣ ತೊಟ್ಟು ಹಾಗೂ ತನ್ಮೂಲಕ ಈ ಪ್ರವಾಸಿಗರು ಸೇರಿದಂತೆ ಬಲಿದಾನವಾಗಿ ಹೋಗಿರುವ ಲಕ್ಷಾಂತರ ಜೀವಿಗಳ ಆತ್ಮಕ್ಕೆ ಶಾಂತಿ ತರುವ ಗುರುತರ ಜವಾಬ್ದಾರಿ ನಮ್ಮೆಲ್ಲರ ಪಾಲಿಗಿದೆ. ಉಗ್ರವಾದವನ್ನು ಬುಡ ಸಮೇತ ನಿರ್ಮೂಲನೆ ಮಾಡಲು ಟೊಂಕ ಕಟ್ಟಿ ಒಗ್ಗಟ್ಟಾಗುವ ಸಮಯ ಇದಾಗಿದೆ. ಜೈ ಹಿಂದ್ ಜೈ ಭಾರತಾಂಬೆ...

# ಭೂಮಿಯ ಕಕ್ಷೆ ಬದಲಾದರೆ...


ತಾಯಿಯೊಂದಿಗೆ ಸಮುದ್ರದ ದಂಡೆಗೆ ಹೋಗಿದ್ದ ಶ್ರೀಕರ, ಕಡಲಕಿನಾರೆಯ ಸೊಬಗನ್ನು ಕಣ್ತುಂಬಿಕೊಂಡಿದ್ದ. ಸಮುದ್ರದ ಅಲೆಗಳಲ್ಲಿ ಆಟವಾಡುತ್ತಾ ಈಜಾಡುತ್ತಿದ್ದ. "ಅಮ್ಮ ಈ ಸಮುದ್ರದ ದಂಡೆ ಎಷ್ಟೊಂದು ಸುಂದರವಾಗಿದೆ ಅಲ್ವಾ. ರಜೆಯಲ್ಲಿ ಮಜಾ ಮಾಡಲು ಇದೊಂದು ಅತ್ಯದ್ಭುತ ಸ್ಥಳ. ಪ್ರತಿವರ್ಷ ನನ್ನ ಇಲ್ಲಿಗೆ ಕರ್ಕೊಂಡು ಬರ್ತೀಯಾ ಅಮ್ಮಾ?" ಎಂದು ಗೋಗರೆದ. ಮಗನ ಮಾತಿಗೆ ನಗುತ್ತಾ 'ಶ್ರೀ ಪ್ರತಿ ರಜೆಗೆ ನಾವು ಇಲ್ಲಿಗೆ ಬಂದರೆ ಉಳಿದ ಸ್ಥಳಗಳನ್ನು ನೋಡೋಕಾಗಲ್ಲ. ಅದ್ಕೆ ಪ್ರತಿ ರಜೆಯಲ್ಲೂ ನಾವು ಬೇರೆ ಬೇರೆ ಸ್ಥಳಗಳಿಗೆ ಹೋಗೋಣ' ಎಂದರು ಅಮ್ಮ. "ಅಮ್ಮಾ ಭೂಮಿಯ ಮೇಲೆ ಇದಕ್ಕಿಂತ ಸುಂದರವಾದ ತಾಣಗಳಿವೆಯೇ" ಎಂದು ತನ್ನ ಮನದಲ್ಲಿ ಮೂಡಿದ ಪ್ರಶ್ನೆಯನ್ನು ಕೇಳಿದ. 'ಹೌದು ಪುಟ್ಟ. ನಾವು ವಾಸಿಸುವ ಭೂಗ್ರಹ ಅತ್ಯದ್ಭುತ ಸ್ಥಳ. ಅನೇಕ ವಿಸ್ಮಯಗಳನ್ನು ಒಳಗೊಂಡ ಚಾರಿತ್ರಿಕ ತಾಣ. ಚರಿತ್ರೆಯ ಮೆಟ್ಟಿಲುಗಳಿಂದ ಆಧುನಿಕ ಸ್ಕೈಸ್ಕ್ರೇಪರ್ ವರೆಗೆ ಸಾಕಷ್ಟು ಅಭಿವೃದ್ಧಿ ಹೊಂದಿದೆ. ಭೂಮಿಯ ಮೇಲಿನ ಚಿತ್ರವಿಚಿತ್ರಗಳನ್ನು ಪಟ್ಟಿ ಮಾಡುತ್ತಾ ಹೋದರೆ ಅದೊಂದು ಉದ್ಗ್ರಂಥವಾಗುತ್ತದೆ. ನಾವು ಒಂದು ದಿನ ಇಲ್ಲಿರ್ತೇವೆ. ನಾಳೆ ಪುನಃ ಕೆಲಸದ ನಿಮಿತ್ತ ಬೇರೆ ಕಡೆ ಚಲಿಸ್ತೇವೆ. ಹಾಗೆಯೇ ಪ್ರತಿದಿನ ನಾವು ಅನೇಕ ಚಲನೆಗಳ ಬಗ್ಗೆ ಮಾತನಾಡುತ್ತೇವೆ ಮತ್ತು ನೋಡುತ್ತೇವೆ. ಆದರೆ ನಾವು ನೆಲೆನಿಂತ ನೆಲದ ಚಲನೆಯನ್ನು ನೆಲೆನಿಂತಲ್ಲೆ ಇನ್ನೂ ನೋಡಲು ಸಾಧ್ಯವಾಗುತ್ತಿಲ್ಲ. ನಮ್ಮ ಗ್ರಹ ನಿರಂತರವಾಗಿ ತನ್ನ ಸುತ್ತ ಸುತ್ತುತ್ತ, ಸೂರ್ಯನ ಸುತ್ತ ಸುತ್ತುತ್ತಲೇ ಇದೆ. ಆದರೆ ಬಹುತೇಕವಾಗಿ ಈ ಸುತ್ತುವಿಕೆ ನಮ್ಮ ಗಮನಕ್ಕೆ ಬರುವುದೇ ಇಲ್ಲ' ಎಂದು ತಮ್ಮ ಪಾಠ ಶುರುಮಾಡಿದರು. "ಅಮ್ಮ ಒಂದುವೇಳೆ ಭೂಮಿಯ ಕಕ್ಷೆ ಬದಲಾದರೆ ಏನಾಗುತ್ತೇ?" ಎಂದು ಶ್ರೀಕರ ಪ್ರಶ್ನಿಸಿದ. ಈ ಪ್ರಶ್ನೆ ನಿಮ್ಮದೂ ಆಗಿದ್ದರೆ ಶ್ರೀಕರನ ತಾಯಿಯ ಉತ್ತರಕ್ಕಾಗಿ ಮುಂದೆ ಓದಿ.




ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಮೊದಲು ಕಕ್ಷೆ ಎಂದರೇನು? ಎಂದು ತಿಳಿಯುವುದು ಅವಶ್ಯಕ. ಸೌರವ್ಯೂಹದ ಪ್ರತಿಯೊಂದು ಗ್ರಹವೂ ಸಹ ಸೂರ್ಯನ ಸುತ್ತ ಸುತ್ತುತ್ತವೆ. ಇದಕ್ಕೆ ಕಾರಣ ಸೂರ್ಯನ ಗುರುತ್ವ. ಇದುವರೆಗೂ ಸೂರ್ಯನ ಗುರುತ್ವದ ಹಿಡಿತದಿಂದ ಯಾವ ಗ್ರಹವೂ ಸಹ ತಪ್ಪಿಸಿಕೊಂಡು ಹೋಗಲು ಸಾಧ್ಯವಾಗಿಲ್ಲ. ಒಂದು ವೇಳೆ ಹೋದರೆ ಅದು ಈ ಸೌರವ್ಯೂಹದ ಗ್ರಹ ಎಂದು ಪರಿಗಣಿತವಲ್ಲ.

ಪ್ರತಿಗ್ರಹವೂ ಒಂದು ನಿರ್ದಿಷ್ಟ ಮಾರ್ಗ(ಹಾದಿ) ದಲ್ಲಿ ಸೂರ್ಯನನ್ನು ಸುತ್ತುತ್ತವೆ. ಈ ಮಾರ್ಗವನ್ನೇ ಕಕ್ಷೆ ಅಥವಾ ಪಥ ಎಂದು ಕರೆಯುತ್ತಾರೆ. ಪ್ರತಿಯೊಂದು ಗ್ರಹವೂ ಕೂಡಾ ನಿಯಮಿತವಾಗಿ ಅದೇ ಮಾರ್ಗದಲ್ಲಿ ಪುನಾವರ್ತಿತವಾಗಿ ಚಲಿಸುತ್ತಲೇ ಇರುತ್ತದೆ. ಸೂರ್ಯನಿಗೆ ಗ್ರಹಗಳಿರುವಂತೆ ಕೆಲವು ಗ್ರಹಗಳಿಗೆ ಸ್ವಾಭಾವಿಕ ಉಪಗ್ರಹಗಳಿವೆ. ಇವುಗಳು ಸಹ ತಮ್ಮ ಗ್ರಹವನ್ನು ನಿರ್ದಿಷ್ಟ ಕಕ್ಷೆಯಲ್ಲಿ ಸುತ್ತುತ್ತವೆ. ಕಕ್ಷೆಯ ಆಕಾರ ವಿಭಿನ್ನವಾಗಿರುತ್ತದೆ. ಕೆಲವು ವೃತ್ತಾಕಾರ, ಕೆಲವು ಧೀರ್ಘವೃತ್ತಾಕಾರ, ಇನ್ನು ಕೆಲವು ಅಂಡಾಕಾರದ ಪಥ ಹೊಂದಿವೆ. ನಮ್ಮ ಭೂಮಿಯ ಕಕ್ಷೆಯು ಅಂಡಾಕಾರ ಅಥವಾ ಧೀರ್ಘವೃತ್ತಾಕಾರವಾಗಿದೆ. ಭೂಮಿಯ ಕಕ್ಷೆಯ ಉದ್ದ 93,98,66,400 ಕಿ.ಮೀ. ಅಂದರೆ ಭೂಮಿ ಸೂರ್ಯನ ಸುತ್ತ ಸುತ್ತುವ ದಾರಿಯ ಉದ್ದ 93,98,66,400 ಕಿ.ಮೀ. ಆಗಿದೆ. ಇಷ್ಟು ದೂರವನ್ನು ಕ್ರಮಿಸಲು ಭೂಮಿ ತೆಗೆದುಕೊಳ್ಳುವ ಅವಧಿ 365 ದಿನ ಅಥವಾ 1 ವರ್ಷ. ಭೂಮಿ ತನ್ನ ಕಕ್ಷೆಯಲ್ಲಿ ಸುತ್ತುವಾಗ ಜನವರಿ 3 ರಂದು ಸೂರ್ಯನಿಗೆ ಅತ್ಯಂತ ಸಮೀಪದಲ್ಲಿ (14,70,97,800 ಕಿ.ಮೀ) ಹಾಗೂ ಜುಲೈ 4 ರಂದು ಅತ್ಯಂತ ದೂರದಲ್ಲಿ (15,20,98,200 ಕಿ.ಮೀ) ಚಲಿಸುತ್ತದೆ.

ಈಗ ನಾವು ನಮ್ಮ ಮುಖ್ಯ ಪ್ರಶ್ನೆಗೆ ಬರೋಣ. ಅನೇಕ ವಿಸ್ಮಯಗಳ ಆಗರವಾದ ಭೂಮಿ ತನ್ನ ಕಕ್ಷೆ ಬದಲಿಸಿದರೆ ಏನಾಗುತ್ತೆ? ಎಂಬುದರ ಕುರಿತು ಒಂದಿಷ್ಟು ಚರ್ಚಿಸೋಣ. ಭೂಮಿ ತನ್ನ ಸುತ್ತಲೂ ಸುತ್ತುವುದುನ್ನು ಭ್ರಮಣೆ ಎನ್ನುತ್ತೇವೆ. ಭೂಮಿ ಸೆಕೆಂಡಿಗೆ 18.5 ಮೈಲು (29.8 ಕಿ.ಮೀ) ವೇಗದಲ್ಲಿ ತನ್ನ ಸುತ್ತ ಸುತ್ತುತ್ತದೆ. ಅಂತೆಯೇ ಭೂಮಿ ಸೂರ್ಯನ ಗುರುತ್ವದಿಂದ ನಿರ್ದಿಷ್ಟ ಕಕ್ಷೆಯಲ್ಲಿ ಸೂರ್ಯನ ಸುತ್ತ ಸುತ್ತುತ್ತದೆ. ಹೀಗೆ ಸುತ್ತುವಾಗ ಭೂಮಿ ಮತ್ತು ಸೂರ್ಯನ ನಡುವೆ ಒಂದು ರೀತಿಯ ಸಮತೋಲನ ಸ್ಥಿತಿ ಇರುತ್ತದೆ. ಇಂತಹ ಸಮತೋಲನ ಸ್ಥಿತಿಯನ್ನು ಬದಲಾಗಬೇಕಾದರೆ ಭಾರೀ ಪ್ರಮಾಣದ ಶಕ್ತಿ ಬೇಕಾಗುತ್ತದೆ. ಅಂದರೆ ಅನ್ಯ ಆಕಾಶಕಾಯವೊಂದು ಭೂಮಿಗೆ ಢಿಕ್ಕಿ ಹೊಡೆಯಬೇಕು ಅಥವಾ ಭಾರೀ ಕ್ಷುದ್ರಗ್ರಹವೊಂದು ಭೂಮಿಗೆ ಅಪ್ಪಳಿಸಬೇಕು. ಆಗ ಮಾತ್ರ ಇವೆರಡರ ನಡುವಿನ ಸಮತೋಲನ ತಪ್ಪಿ ಭೂಮಿಯ ಕಕ್ಷೆ ಬದಲಾಗುತ್ತದೆ. ಇದರ ಪರಿಣಾಮ ಸಾಮೂಹಿಕ ದುರಂತ ಎಂದು ಹೇಳಲಾಗುತ್ತದೆ.



ಆರ್.ಬಿ.ಗುರುಬಸವರಾಜ
ಶಿಕ್ಷಕರು, ಹ.ಬೊ.ಹಳ್ಳಿ

Scan For Digital Colourful
HAMPI TIMES E-paper

ಮೇಲಕ್ಕೆ ಎಸೆದ ಚಂಡು ಮರಳಿ ಭೂಮಿಗೆ ಬರುವಂತೆ, ಸೂರ್ಯನ ಗುರುತ್ವಾಕರ್ಷಣೆಗೆ ಒಳಪಟ್ಟ ಭೂಮಿಯ ಕಕ್ಷೆ ತಪ್ಪಿದರೆ ಅದು ಸೂರ್ಯನೆಡೆಗೆ ಚಲಿಸುತ್ತದೆ. ಆಗ ಆಗುವ ಅಪಾಯಗಳನ್ನು ಊಹಿಸುವುದು ಸ್ವಲ್ಪ ಕಷ್ಟ. ಭೂಮಿಯ ಕಕ್ಷೆ ಬದಲಾದರೆ ನಮ್ಮ ಭೂಮಿಯ ಸಮತೋಲನ ತಪ್ಪಿ, ಸೂರ್ಯನಿಗೆ ಅಪ್ಪಳಿಸುತ್ತದೆ. ಆಗ ಬೆಂಕಿಗೆ ಬಿದ್ದ ಪತಂಗದಂತೆ ನಮ್ಮೂ ಭೂಮಿ ಸೂರ್ಯನ ಅಗಾಧ ಶಾಖದಲ್ಲಿ ಸುಟ್ಟು ಭಸ್ಮವಾಗುತ್ತದೆ.

ಈ ಪ್ರಕ್ರಿಯೆ ಒಮ್ಮೆಲೇ ಸಂಭವಿಸುವುದಿಲ್ಲ. ಭೂಮಿ ಸಮತೋಲನ ತಪ್ಪಿ ಸೂರ್ಯನ ಅಂಗಳಕ್ಕೆ ಬೀಳಲು ಸುಮಾರು 65 ದಿನಗಳನ್ನು ತೆಗೆದುಕೊಳ್ಳುತ್ತದೆ. 41ನೇ ದಿನಕ್ಕೆ ಶುಕ್ರನ ಕಕ್ಷೆ ದಾಟುತ್ತೇವೆ ಮತ್ತು 57ನೇ ದಿನಕ್ಕೆ ಬುಧನ ಕಕ್ಷೆಯನ್ನು ದಾಟುತ್ತೇವೆ. ದಿನಗಳು ಉರುಳಿದಂತೆ ಭೂಮಿ ಸೂರ್ಯನಿಗೆ ಹತ್ತಿರವಾಗುತ್ತದೆ ಮತ್ತು ಹೆಚ್ಚು ಹೆಚ್ಚು ಬಿಸಿಯಾಗತೊಡಗುತ್ತದೆ. ಭೂಮಿಯ ಮೇಲಿನ ಸರಾಸರಿ ತಾಪಮಾನ 500 ಸೆಲ್ಸಿಯಸ್. ಭೂಮಿ ಸೂರ್ಯನೆಡೆಗೆ ಚಲಿಸುತ್ತಿದ್ದಂತೆ ತಾಪಮಾನದಲ್ಲಿ ಏರಿಕೆಯಾಗುತ್ತಲೇ ಇರುತ್ತದೆ. ಅದು ಬುಧನ ಬಳಿ ಬರುತ್ತಿರುವ ವೇಳೆಗೆ 30000 ಸೆಲ್ಸಿಯಸ್‌ಗೂ ಹೆಚ್ಚು ಉಷ್ಣತೆ ಪಡೆದಿರುತ್ತದೆ. ಈ ಹಂತದ ತಾಪಮಾನದಲ್ಲಿ ಭೂಮಿಯ ಮೇಲಿನ ಯಾವುದೇ ಜೀವಿ, ಮಾನವನಿರ್ಮಿತ ಯಾವುದೇ ವಸ್ತು, ಬದುಕಲಾರದು ಅಲ್ಲವೇ? ಅಂತರ್ಜಲ ಸೇರಿದಂತೆ ಭೂಮೇಲ್ಮೈ ಮೇಲಿನ ಎಲ್ಲಾ ನೀರೂ ಸಹ ಆವಿಯಾಗಿ ಹೋಗುತ್ತದೆ. ಗಿಡಮರ ಯಾವುದೂ ಬದುಕಲು ಸಾಧ್ಯವಿಲ್ಲ.

ಸಹಜವಾಗಿ ಸದ್ಯಕ್ಕಂತೂ ಭೂಮಿಯ ಕಕ್ಷೆ ಬದಲಾಗುವುದಿಲ್ಲ. ಆದರೆ ಭವಿಷ್ಯದ ಜಾಡು ಹಿಡಿದು ಹೊರಟರೆ, ಭುಮಿ ಮತ್ತು ಸೂರ್ಯನ ಅಂತರವನ್ನು ದೂರಮಾಡಲು ಸಾಧ್ಯವಿಲ್ಲ. ಏಕೆಂದರೆ ಸೂರ್ಯನಿಗೂ ಸಾವು ಸಮೀಪಿಸುವ ವೇಳೆ ಕೆಂಪು ದೈತ್ಯವಾಗಿ ಹೊಮ್ಮುತ್ತದೆ. ಕ್ರಮೇಣವಾಗಿ ಬುಧ ಮತ್ತು ಶುಕ್ರನ ಕಕ್ಷೆಗಳನ್ನು ದಾಟಿ ಭೂಮಿಯ ಕಕ್ಷೆಗೂ ಆಗಮಿಸುತ್ತದೆ ಎಂಬ ವಾದವಿದೆ. ಆಗ ಏನಾಗುತ್ತೆ ಎಂಬುದಕ್ಕೆ ಉತ್ತರವೂ ಇದೇ ಆಗಿದೆ. ಭೂಮಿ ಮತ್ತು ಸೂರ್ಯ ಪರಸ್ಪರ ಸಮೀಪಿಸಿದಾಗ ಸೌರ ವಿಕಿರಣದ ಪ್ರಮಾಣ ಹೆಚ್ಚುತ್ತದೆ. ಆಗ ಎಲ್ಲವೂ ಭಸ್ಮ. ಭವಿಷ್ಯದ ವಿದ್ಯಮಾನನೋಡಲುನಾವುಇರುವುದಿಲ್ಲವಾದರೂ ಏನಾಗುತ್ತೆ ಎಂಬುದನ್ನು ತಿಳಿಯಲಾರದೂ ಇದನ್ನು ಗ್ರಹಿಸುವುದು ಅಗತ್ಯ. ಅಲ್ಲವೇ? ಎನ್ನುತ್ತಾ ಶ್ರೀಕರನ ತಾಯಿ ತಮ್ಮ ಪಾಠ ಮುಗಿಸಿದರು.

ಸುಮಾರು 65 ದಶಲಕ್ಷ ವರ್ಷಗಳ ಹಿಂದೆ ಯುಕಾಟಾನ್ ಪರ್ಯಾಯ ದ್ವೀಪ(ಉತ್ತರ ಅಮೇರಿಕಾ)ದ ಬಳಿ ಭೂಮಿಗೆ ಕ್ಷುದ್ರಗ್ರಹವೊಂದು ಅಪ್ಪಳಿಸಿತ್ತು. ಅದು ಹೈಡ್ರೋಜನ್ ಬಾಂಬ್‌ಗಿಂತ 5,00,000 ಪಟ್ಟು ಅಥವಾ 50 ಮೆಹಾವ್ಯಾಟ್‌ನಷ್ಟಿತ್ತು ಎಂದು ಅಂದಾಜಿಸಲಾಗಿದೆ. ಅದರ ಸ್ಫೋಟದಿಂದ 10–15 ಕಿ.ಮೀ ಅಗಲದ ಕುಳಿಯೊಂದು ನಿರ್ಮಾಣವಾಗಿದೆ ಎಂಬುದಕ್ಕೆ ಈಗಲೂ ಪುರಾವೆ ಇದೆ. ಕ್ಷುದ್ರಗ್ರಹ ಅಪ್ಪಳಿಸಿದ್ದರಿಂದಲೇ ಡೈನೋಸಾರ್‌ಗಳು ಸೇರಿದಂತೆ ಅಪಾರ ಜೀವಿಗಳು ನಾಶವಾದವು ಎಂಬುದನ್ನು ಗಮನಿಸಬಹುದು. ಆಗ ಭೂಮಿಯ ಕಕ್ಷೆಯಲ್ಲಿ ಒಂಚೂರು ಬದಲಾವಣೆಯಾದರೂ ಅದು ಸಾಗರದ ಒಂದು ಅಣುವಿನಷ್ಟು ಮಾತ್ರ ಎಂಬುದೂ ಸತ್ಯ. ಆ ಘಟನೆಯಿಂದ ಪುನಃ ಚೇತರಿಸಿಕೊಂಡು ಜೀವನ ನಡೆಸುತ್ತಿದ್ದೇವೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಸೈನಿಕರ ಸೇವೆ ಮರೆಯದಿರಿ

ದೇಶ ಕಾಯುವ ಯೋಧ
ನೆತ್ತರ ಮಡುವಿನಲ್ಲಿದ್ದು
ತಾಯಿ ಭಾರತಾಂಬೆಗೆ
ಗೆಲುವಿನ ತಿಲಕವಿಟ್ಟು
ಭಾರತ್ ಮಾತಾಕಿ ಜೈ
ಎಂದು ಪ್ರಾಣತ್ಯಾಗ
ಮಾಡುತ್ತಿರುವರು ಅಲ್ಲಿ

ತನ್ನವರ ತನ್ನತನವ ಬಿಟ್ಟು
ತಮ್ಮವರ ತೊರೆದು
ದೇಶ ಸೇವೆಯೇ ಈಶ ಸೇವೆ
ಎಂದೇನಿಸಿ ತಾಯಿ
ಭಾರತಾಂಬೆಯ ಕಾಯುವ
ಸೇವಕ ನಾನೆಂಬರು ಅಲ್ಲಿ

ವೇಷ ಭಾಷೆ ಧರ್ಮದ
ಬೇಧಭಾವ ಮರೆತು
ನಾವೆಲ್ಲಾ ಒಂದೇ ತಾಯಿ
ಮಕ್ಕಳು ನಮ್ಮ ಪ್ರಾಣವದು
ತಾಯಿಗೆ ಅರ್ಪಣೆಯೆಂಬರು
ಅಲ್ಲಿ

ದೇಶದ ರಕ್ಷಣೆಗೆ ತೊರೆಯಿರಿ
ಬೇಧಭಾವಗಳನು
ಎಲ್ಲರೂ ಒಂದೇ ಎಂಬುದ
ನೆನಪಲ್ಲಿಡಿ ನಮ್ಮ ಸೈನಿಕರ
ಸೇವೆ ಮರೆಯದಿರಿ
ನೀಚ ಕೃತ್ಯ ಎಸಗಿದವರಿಗೆ
ಶಿಕ್ಷೆ ಕೊಟ್ಟಾಗಲೇ ಹುತಾತ್ಮರ
ಆತ್ಮಕ್ಕೆ ಶಾಂತಿ ಎಂದು
ಸಾಬೀತು ಪಡಿಸಬೇಕು ಇಲ್ಲಿ

– ಜಿ.ಆರ್.ಬಸವರಾಜೇಶ್ವರಿ

### ಹೆಸರು

ಹೆಸರಿಗಾಗಿ ನೀ ಕಾರ್ಯ, ದಾನ
ಮಾಡಬೇಡ
ಕಾರ್ಯ, ದಾನ ಮಾಡುವುದೊಂದೇ
ಉದ್ದೇಶ
ಹೆಸರು ಕೀರ್ತಿ ತಾನಾಗೇ
ಹಿಂಬಾಲಿಸುವವು ನೆರಳಿನಂತೆ......
ಹೆಸರನ್ನು ಕೇಳಿ ಪಡೆಯಬೇಡ
ಸೇವೆಯನ್ನು ಕೇಳಿ ಪಡೆ
ಪ್ರಚಾರವಿಲ್ಲದ ಸೇವೆ ಪರಮಾತ್ಮನ ಸೇವೆ...
ಹೆಸರೇನು ನಮ್ಮ ಸ್ವತ್ತಲ್ಲ
ಹೆಸರು ಇಟ್ಟುಕೊಂಡವರೂ ನಾವಲ್ಲ
ಇದನ್ನರಿತ ಮನುಜ
ಆಗುವನು ತತ್ವಜ್ಞಾನದ ಖನಿಜ.

– ಪ್ರೊ.ಮಧ್ವರಾಜ್ ಕೊಲ್ಹಾಪುರ್
ಹೊಸಪೇಟೆ

## ಉಗ್ರರಿಂದ ತಪ್ಪಿಸಿಕೊಳ್ಳಲು ನೆರವಾದ ಪೊಲೀಸ್ ಟ್ರೈನಿಂಗ್ ಪ್ರಜ್ಞೆ

**ಹಂಪಿ ಟೈಮ್ಸ್ ಹರಪನಹಳ್ಳಿ**



ಅಳಿಯನ ಪೊಲೀಸ್ ಟ್ರೈನಿಂಗ್‌ನಲ್ಲಿ ಕಲಿತ ಪ್ರಜ್ಞೆಯಿಂದ ಪತ್ನಿ ಮತ್ತು ಅತ್ತೆ, ಮಾವ ಸೇಫ್ ಆಗಿ ಕಾಶ್ಮೀರದ ಉಗ್ರರ ದಾಳಿ ಯಿಂದ ಕೂದಲೆಳೆ ಅಂತರದಲ್ಲಿ ಹರಪನಹಳ್ಳಿಯ ಟಿ.ಎಂ. ರಾಜಶೇಖರ್ ಕುಟುಂಬ ಪಾರಾಗಿ ಸ್ವಸ್ಥಳಕ್ಕೆ ವಾಪಾಸ್ಸಾಗಿದ್ದರೆ.

ಪತ್ರಿಕೆ ಹೇಳಿಕೆ ನೀಡಿರುವ ಅವರು ಹರಪನಹಳ್ಳಿಯ ತಗ್ಗಿನ ಮಠದ ಬಿಇಡಿ ಕಾಲೇಜಿನ ಡೀನ್ ಟಿ. ಎಂ.ರಾಜಶೇಖರ್ ಪತ್ನಿ ಬಿ.ಎಂ.ಉಮಾದೇವಿ ದಂಪತಿಗಳು ಪುತ್ರಿ ಗೌರಿಕಾ, ಅಳಿಯ ಕೊಟ್ರಬಸಯ್ಯ ಪ್ರಾಣಾಪಾಯದಿಂದ ಪಾರಾಗಿ ಬಂದಿದ್ದಾರೆ. ಏ.18 ರಂದು ಕಾಶ್ಮೀರಕ್ಕೆ ಕುಟುಂಬ ಪ್ರವಾಸ ತೆರಳಿದ್ದರು. ಗುಡ್ಡದ ಮೇಲಿದ್ದ ಅಳಿಯ ಮತ್ತು ಮಗಳು ಕೇವಲ 5 ಮೀಟರ್ ಅಂತರದಲ್ಲೇ ಗುಂಡಿನ ದಾಳಿಯನ್ನು ಕಂಡು ಅಳಿಯ ಕೊಟ್ರಬಸಯ್ಯರ ಪೊಲೀಸ್ ಪ್ರಜ್ಞೆಯಿಂದ ಉಗ್ರರ ದಾಳಿಯ ಸೂಕ್ಷ್ಮತೆ ಅರಿತು ಪಾರಾಗಿದ್ದಾರೆ.

ಗುಲ್ಮಾರ್ಗ್, ಪುಲ್ವಾಮಾ ಎಲ್ಲ ಪ್ರವಾಸದಲ್ಲೂ ಜತೆ ಜತೆಯಾಗೇ ಇದ್ದ ರಾಜಶೇಖರ್ ಕುಟುಂಬ ದಿಂದ ಅದೇ ಕೋ ಪುಲ್ಗಾಮ್ ಗುಡ್ಡ ಹತ್ತಲು ಕುದುರೆ ದರ ಏರಿಕೆಯಿಂದಾಗಿ ಮನಸ್ಸು ಮಾಡಿಲ್ಲ. ಇದೇ ಸುರಕ್ಷತೆಯಾಗಿ ಕುಟುಂಬ ಹಿಂದಿರುಗಲೂ ಕಾರಣವಾಗಿರಬಹುದು ಎನ್ನುವ ಅವರ ಸ್ವಅನುಭವದ ಮಾತಾಗಿದೆ. ಇದೀಗ ಸುರಕ್ಷಿತವಾಗಿ ಮರಳಿದ್ದೇವೆ. ನಮ್ಮೊಂದಿಗೆ ಇದ್ದ ಬಹುತೇಕ ಕನ್ನಡಿಗರು ಉಗ್ರರ ಗುಂಡಿಗೆ ಬಲಿಯಾದರು ಎನ್ನುವ ದುರಂತ ಅರಗಿಸಿಕೊಳ್ಳಲಾಗುತ್ತಿಲ್ಲ ಎನ್ನುವ ದುಃಖವೂ ಇದೆ ಎನ್ನುತ್ತಾರೆ. ಪೆಹಲ್ಗಾಮ್ ನೋಡಲು ಸ್ವರ್ಗದಂತೆ ಕಂಡರೂ, ಉಗ್ರ ಚುಟುವಟಿಕೆ ಅತ್ಯಂತ ಭಯಾನಕ. ಮೊದಲೇ ಭಯಬೀತರಾಗಿ ಸ್ವಂತ ಸ್ಥಳಕ್ಕೆ ಹಿಂದಿರುಗಲು ವಿಮಾನ ಪೂರ್ವಭಾವಿ ಬುಕ್ಕಿಂಗ್ ಮಾಡಲಾಗಿದ್ದರೂ, ವಿಮಾನದರವನ್ನು ಉಗ್ರರ ದಾಳಿಯ ಪರಿಣಾಮ ಏರಿಕೆ ಮಾಡಿದರು. ಒಟ್ಟಾರೆ ನಮ್ಮ ಕುಟುಂಬ ಎಲ್ಲರೂ ಸುರಕ್ಷಿತವಾಗಿ ಬದುಕಿ ಬಂದಿದ್ದೇವೆ. ಆದರೂ ಇಂತಹಾ ಅಮಾನವೀಯತೆ ಕೊನೆಗಾಣಬೇಕೆಂದಿದ್ದಾರೆ.

# ಸ್ವಯಂ ರಕ್ಷಣಾ ಕ್ರಮಗಳಿಂದ ಮಲೇರಿಯಾ ನಿರ್ಮೂಲನೆ ಸಾಧ್ಯ

### ಜಾಗೃತಿ ಜಾಥಾದಿಂದ ಸಾರ್ವಜನಿಕರಿಗೆ ಅರಿವು : ಆರ್‌ಸಿಹೆಚ್ ಅಧಿಕಾರಿ ಡಾ. ಜಂಬಯ್ಯ ಹೇಳಿಕೆ.




**■ ಹಂಪಿ ಟೈಮ್ಸ್ ಹೊಸಪೇಟೆ**

ಮಲೇರಿಯಾ ನಿರ್ಮೂಲನೆ ಪ್ರತಿಯೊಬ್ಬ ಸಾರ್ವಜನಿಕರ ಜವಾಬ್ದಾರಿಯಾಗಬೇಕು. ಈ ನಿಟ್ಟಿನಲ್ಲಿ ಸ್ವಯಂ ರಕ್ಷಣಾ ಕ್ರಮಗಳನ್ನು ಪಾಲಿಸಿದರೇ ನಿಯಂತ್ರಣ ಸುಲಭ ಸಾಧ್ಯ ಎಂದು ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಜಂಬಯ್ಯ ಹೇಳಿದರು.

ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಆವರಣದಲ್ಲಿ ಜಿಲ್ಲಾಡಳಿತ, ಜಿಪಂ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಏರ್ಪಡಿಸಿದ್ದ ವಿಶ್ವ ಮಲೇರಿಯಾ ದಿನಾಚರಣೆ ನಿಮಿತ್ತ ಜಿಲ್ಲಾ ಮಟ್ಟದ ಜಾಗೃತಿ ಜಾಥಾವನ್ನು ಹಸಿರು ನಿಶಾನೆ ಪ್ರದರ್ಶಿಸಿ ಚಾಲನೆ ನೀಡಿ ಶುಕ್ರವಾರ ಅವರು ಮಾತನಾಡಿದರು, ಸೋಂಕಿತ ಅನಾಫೀಲಿಸ್ ಹೆಣ್ಣು ಸೊಳ್ಳೆ ಕಚ್ಚುವುದರಿಂದ ಮಲೇರಿಯಾ ಹರಡುತ್ತದೆ. ಸಾರ್ವಜನಿಕರು ಮಲೇರಿಯಾ ನಿಯಂತ್ರಣಕ್ಕೆ ಸ್ವಯಂ ರಕ್ಷಣಾ ಕ್ರಮಗಳನ್ನು ಪಾಲಿಸಿದರೇ ಗರಿಷ್ಟಮಟ್ಟದಲ್ಲಿ ನಿಯಂತ್ರಣ ಸಾಧ್ಯವಾಗಲಿದೆ. ಮನೆಗಳಲ್ಲಿ ಸೊಳ್ಳೆ ಪರದೆ ಬಳಕೆ, ಸೊಳ್ಳೆ ಬತ್ತಿ, ಮುಲಾಮು ಬಳಕೆ, ಬೇವಿನ ಎಲೆಯ, ಸಾಂಬ್ರಾಣಿ, ಧೂಪದ ಹೊಗೆ ಹಾಕುವುದು. ಕಿಟಿಕಿ ಬಾಗಿಲುಗಳ ಮೂಲಕ ಸೊಳ್ಳೆಗಳು ಮನೆಯೊಳಗೆ ಬಾರದಂತೆ ಕ್ರಮ ವಹಿಸುವುದು. ಮೈತುಂಬ ಬಟ್ಟೆ ಧರಿಸುವುದು ಸೇರಿದಂತೆ ಮನೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಕಲುಷಿತ ನೀರು ನಿಲ್ಲದಂತೆ ನೈರ್ಮಲ್ಯ ಕಾಪಾಡಬೇಕು. ಪ್ರತಿ ಮೂರು ದಿನಗಳಿಗೊಮ್ಮೆ ಕುಡಿಯುವ ನೀರು, ಬಳಸುವ ನೀರು ಬದಲಿಸಬೇಕು. ಮಳೆಯ ನೀರು ನಿಲ್ಲುವಂತಹ ಅನುಪಯುಕ್ತ ವಸ್ತುಗಳನ್ನು ವಿಲೇವಾರಿ ಮಾಡಬೇಕಿದೆ. ಚಳಿಜ್ವರ, ನಡುಕ, ಮೈಬೆವರುವಿಕೆ, ತಲೆನೋವು ಸೇರಿ ಯಾವುದೇ ಜ್ವರ ಬಂದರೂ ನಿರ್ಲಕ್ಷಿಸದೇ, ಸ್ವಯಂ ಚಿಕಿತ್ಸೆ ಮಾಡಿಕೊಳ್ಳದೇ ತಕ್ಷಣ ವೈದ್ಯರನ್ನು ಭೇಟಿ ಮಾಡಿ ಸಲಹೆ ಪಡೆಯಬೇಕು. ರಕ್ತ ಪರೀಕ್ಷೆಯಿಂದ ಮಲೇರಿಯಾ ಪತ್ತೆಯಾಗಲಿದೆ. 1–14 ದಿನಗಳ ಚಿಕಿತ್ಸೆಯಿಂದ ಮಲೇರಿಯಾ ಸಂಪೂರ್ಣ ಗುಣಮುಖ ಸಾಧ್ಯ ಎಂದರು.


ತಾಲ್ಲೂಕು ಆರೋಗ್ಯ ಅಧಿಕಾರಿ ಡಾ.ಬಸವರಾಜ ಮಾತನಾಡಿ, ಮಲೇರಿಯಾ ಜ್ವರಕ್ಕೆ ಆರೋಗ್ಯ ಇಲಾಖೆಯಿಂದ ಉಚಿತ ಸೇವೆಗಳನ್ನು ನೀಡಲಾಗುತ್ತದೆ. ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ರಕ್ತ ಪರೀಕ್ಷೆ ಮತ್ತು ಮಲೇರಿಯಾಕ್ಕೆ ಸೂಕ್ತ ಚಿಕಿತ್ಸೆ ನೀಡಲಾಗುವುದು. ಸಮಸ್ಯಾತ್ಮಕ ಪ್ರದೇಶಗಳಲ್ಲಿ ಕೀಟನಾಶಕ ಸಿಂಪರಣೆ ಮತ್ತು ಧೀರ್ಘಾವಧಿ ಕೀಟನಾಶಕ ಲೇಪಿತ ಸೊಳ್ಳೆ ಪರದೆಗಳನ್ನು ವಿತರಿಸಲಾಗುವುದು. ಲಾರ್ವಾಹಾರಿ ಮೀನು ಗಳನ್ನು ಬಾವಿ, ಕೆರೆ, ಕುಂಟೆಗಳಲ್ಲಿ ಬಿಡಲಾಗುತ್ತದೆ. ಆರೋಗ್ಯ ಸಹಾಯಕರು ಮತ್ತು ಆಶಾ ಕಾರ್ಯಕರ್ತೆರಿಂದ ಗ್ರಾಮಮಟ್ಟದಲ್ಲಿ ರಕ್ತ ಪರೀಕ್ಷೆ ಮತ್ತು ಮಲೇರಿಯಾ ಜ್ವರಕ್ಕೆ ಸೂಕ್ತ ಚಿಕಿತ್ಸೆ ನೀಡಲಾಗುತ್ತದೆ. ಸಾರ್ವಜನಿಕರು ಎಲ್ಲಾ ಸೇವೆಗಳನ್ನು ಉಪಯೋಗಿಸಿಕೊಳ್ಳುವ ಮೂಲಕ ಮಲೇರಿಯಾ ಮುಕ್ತ ಜಿಲ್ಲೆಯನ್ನಾಗಿಸಲು ಸಹಕರಿಸಬೇಕಿದೆ ಎಂದರು.

ಬಳಿಕ ಮಲೇರಿಯಾ ಜ್ವರ ನಿಯಂತ್ರಣ ಕ್ರಮಗಳ ಬಗ್ಗೆ ಪೋಸ್ಟರ್‌ಗಳನ್ನು ಬಿಡುಗಡೆಗೊಳಿಸಲಾಯಿತು. ಜಾಗೃತಿ ಜಾಥಾ ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಿಂದ ಆರಂಭಿಸಿ ಪ್ರಮುಖ ಬೀದಿಗಳ ಮೂಲಕ ವೀರ ಮದಕರಿ ವೃತ್ತ, ಡಾ.ಬಿ.ಆರ್. ಅಂಬೇಡ್ಕರ್ ವೃತ್ತದವರೆಗೆ ವಿವಿಧ ಘೋಷಣೆ ಗಳನ್ನು ಕುಗುತ್ತಾ ಜನಜಾಗೃತಿ ಮೂಡಿಸಲಾಯಿತು.

ಈ ವೇಳೆ ಜಿಲ್ಲಾ ಮಲೇರಿಯಾ ಅಧಿಕಾರಿ ಡಾ.ಸತೀಶ್‌ಚಂದ್ರ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಧರ್ಮನಗೌಡ ಸೇರಿದಂತೆ ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.

## ವೃದ್ಧಾಶ್ರಮಕ್ಕೆ ಶ್ರೀಧರ್ಮಸ್ಥಳ ಸಂಘದಿಂದ ಲಕ್ಷ ರೂ ಸಹಾಯಧನ

### ತಾಲೂಕಿನ ದೇವಾಲಯ ಅಭಿವೃದ್ಧಿಗೆ 2.50 ಕೋಟಿ ರೂ. । ಯೋಜನಾಧಿಕಾರಿ ಡಿ.ಸುಬ್ರಹ್ಮಣ್ಯ ಹೇಳಿಕೆ




**■ ಹಂಪಿ ಟೈಮ್ಸ್ ಹರಪನಹಳ್ಳಿ**

ಪಟ್ಟಣದ ವಾಸವಿ ಕಲ್ಯಾಣ ಮಂಟಪದ ಮುಂಭಾಗದಲ್ಲಿ ಕಿತ್ತೂರುರಾಣಿ ಚೆನ್ನಮ್ಮ ಮಹಿಳಾ ಸ್ವಸಹಾಯ ಸಂಘದ ಪುನೀತಾಶ್ರಮ ವೃದ್ಧಾಶ್ರಮ ಕೇಂದ್ರಕ್ಕೆ ಶ್ರೀಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ವತಿಯಿಂದ ವಾತ್ಸಲ್ಯ ಯೋಜನೆ ಯಡಿಯಲ್ಲಿ 1 ಲಕ್ಷ ರೂ ಸಹಾಯಧನದ ಮಂಜೂರಾತಿ ಪ್ರಮಾಣ ಪತ್ರವನ್ನು ವಿತರಿಸಲಾಯಿತು.

ಕಿತ್ತೂರುರಾಣಿ ಚೆನ್ನಮ್ಮ ಮಹಿಳಾ ಸ್ವಸಹಾಯ ಸಂಘದ ಪುನೀತಾಶ್ರಮ ವೃದ್ಧಾಶ್ರಮ ಕೇಂದ್ರಕ್ಕೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ಡಿ.ಸುಬ್ರಹ್ಮಣ್ಯ ಅವರು ಮಾತನಾಡಿ, ಶ್ರೀಧರ್ಮಸ್ಥಳ ಸಂಘವು ರಾಜ್ಯದಲ್ಲಿ ಸಾಕಷ್ಟು ಹಲವಾರು ಜನಪರ ಕಾರ್ಯಕ್ರಮಗಳನ್ನು ನೀಡುತ್ತಾ ಬಂದರೂ ಇಂದು ಎಲೆಮರೆಕಾಯಿಯಾಗಿ ಉಳಿದಿದೆ.

ತಾಲೂಕಿನ 210 ದೇವಾಲಯಗಳ ಅಭಿವೃದ್ಧಿಗೆ 2.50 ಕೋಟಿ ಹಣವನ್ನು ಧರ್ಮಸ್ಥಳ ಸಂಘದ ವತಿಯಿಂದ ತಾಲೂಕಿಗೆ ನೀಡಲಾಗಿದೆ. ಹಾಗೂ 202 ನಿರ್ಗತಿಕರಿಗೆ ಪ್ರತಿ ತಿಂಗಳು ಒಂದು ಸಾವಿರ ಮಾಸಾಶನ ಹಾಗೂ ಮನೆ ಇಲ್ಲದ ನಿರ್ಗತಿಕರಿಗೆ ಮನೆಗಳನ್ನು ನಿರ್ಮಿಸಿ ಕೊಡುತ್ತಾ ಬಂದಿದೆ. ಈ ವರ್ಷವೂ ಕೂಡ ಎರಡು ಮನೆಗಳನ್ನು ನಿರ್ಮಿಸಲು ಪರಮಪೂಜ್ಯರಾದ ಶ್ರೀ ವಿರೇಂದ್ರ ಹೆಗಡೆಯವರು ಅವಕಾಶ ಮಾಡಿಕೊಟ್ಟಿದ್ದಾರೆ ಎಂದರು.

ತಾಲೂಕಿನಲ್ಲಿ ಕೆಲವರ ಮನೆಗಳಿಗೆ ಬೆಂಕಿ ಬಿದ್ದು, ಮನೆ ಸುಟ್ಟು ನಷ್ಟ ಉಂಟಾದವರಿಗೆ ಸಹಾಯಧನವನ್ನು ಸಂಸ್ಥೆಯು ತಾಲೂಕಿನಲ್ಲಿ ಕಳೆದ 12 ವರ್ಷಗಳಲ್ಲಿ ಮಾಡುತ್ತ ಬಂದಿದೆ. ತಾಲೂಕಿನಲ್ಲಿ 7 ಕೆರೆ ಅಭಿವೃದ್ಧಿ ಪಡಿಸಲು ಸಂಸ್ಥೆಯು ನಿರ್ಧಾರ ತೆಗೆದುಕೊಂಡಿದ್ದು, ಅದರಂತೆ ಈಗಾಗಲೇ ಐದು ಕೆರೆಗಳ ಸ್ವಚ್ಛತ ಕಾರ್ಯ ಸೇರಿ ಇನ್ನೂ ಆನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗಿದೆ. ಕೆರೆಗಳ ಅಭಿವೃದ್ಧಿಗೆ 49 ಲಕ್ಷ ಹಣವನ್ನು ಸಂಸ್ಥೆಯು ಒದಗಿಸಿದೆ ಎಂದರು.

ಪಟ್ಟಣದಲ್ಲಿ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ವತಿಯಿಂದ ವಾತ್ಸಲ್ಯ ಯೋಜನೆಯಡಿ 1 ಲಕ್ಷ ಸಹಾಯಧನವನ್ನು ಕಿತ್ತೂರುರಾಣಿ ಚೆನ್ನಮ್ಮ ಮಹಿಳಾ ಸ್ವಸಹಾಯ ಸಂಘದ ಪುನೀತಾಶ್ರಮ ವೃದ್ಧಾಶ್ರಮ ನಿರ್ವಹಣೆಗಾಗಿ ಸಂಘದ ಕಾರ್ಯದರ್ಶಿ ಶ್ವೇತ ಅವರಿಗೆ 1ಲಕ್ಷದ ಮಂಜೂರಾತಿ ಪತ್ರವನ್ನು ವಿತರಿಸಿದರು.

ಈ ವೇಳೆ ಮುಖಂಡರಾದ ತಾಲೂಕು ಪಂಚಾಯತಿ ಮಾಜಿ ಸದಸ್ಯ ಹುಲಿಕಟ್ಟಿ ಹೆಚ್. ಚಂದ್ರಪ್ಪ, ಪಿ.ಪ್ರಸನ್ನಕುಮಾರ್ ಜೈನ್, ಸಂಘದ ಕಾರ್ಯದರ್ಶಿ ಶ್ವೇತ, ಸವಿತಾ, ದೇವರಮ್ಮ, ರಾಘವೇಂದ್ರ, ವನಿತಾ, ಗಾದಿಲಿಂಗಪ್ಪ, ಹನುಮಂತಪ್ಪ, ನಾಗರಾಜ್ ಇತರರು ಇದ್ದರು.

## ಜ್ವರವಿದ್ದಲ್ಲಿ ರಕ್ತಲೇಪನ ಪರೀಕ್ಷೆ ಮಾಡಿಸಿ

### ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಹೇಳಿಕೆ

**■ ಹಂಪಿ ಟೈಮ್ಸ್ ಬಳ್ಳಾರಿ**

ಸಾರ್ವಜನಿಕರು ಯಾವುದೇ ಜ್ವರವಿರಲಿ, ಮೊದಲು ರಕ್ತಲೇಪನ ಪರೀಕ್ಷೆ ಮಾಡಿಸಬೇಕು. ಶೂನ್ಯ ಮಲೇರಿಯಾ ಗುರಿ ತಲುಪಲು ಮತ್ತು ರೋಗ ತಡೆಗಟ್ಟಲು ಇಲಾಖೆಯೊಂದಿಗೆ ಕೈಜೋಡಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾ ಕಚೇರಿ ವತಿಯಿಂದ ವಿಶ್ವ ಮಲೇರಿಯಾ ದಿನಾಚರಣೆ–2025 ಅಂಗವಾಗಿ "ಮಲೇರಿಯಾ ನಮ್ಮೊಂದಿಗೆ ಕೊನೆಗೊಳ್ಳುತ್ತದೆ. ಮರು ಹೂಡಿಕೆ ಮಾಡಿ, ಮರು ಕಲ್ಪನೆ ಮಾಡಿ, ಮರು ಉತ್ತೇಜನ ನೀಡೋಣ" ಎಂಬ ಘೋಷವಾಕ್ಯದೊಂದಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಚೇರಿ ಆವರಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಹತ್ತಿರದ ಸರ್ಕಾರಿ ಆಸ್ಪತ್ರೆಯಲ್ಲಿ ಮಲೇರಿಯಾ ರೋಗಕ್ಕೆ ಉಚಿತವಾಗಿ ರಕ್ತ ಪರೀಕ್ಷೆ ಹಾಗೂ ಸೂಕ್ತ ಚಿಕಿತ್ಸೆ ನೀಡಲಾಗುತ್ತದೆ. ಇದರ ಸದುಯೋಗಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಆರ್.ಅಬ್ದುಲ್ಲಾ ಅವರು ಮಾತನಾಡಿ, ಮಲೇರಿಯಾ ಜ್ವರವು ಪ್ಲಾಸ್ಮೋಡಿಯಂ ಎಂಬ ಪರಾವಲಂಭಿ ಸೂಕ್ಷ್ಮಾಣುವಿನಿಂದ ಉಂಟಾಗಬಹುದಾಗಿದ್ದು, ಹೆಣ್ಣು ಅನಾಫಿಲೀಸ್ ಸೊಳ್ಳೆಯ ಕಚ್ಚುವಿಕೆಯಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ಚಳಿ, ನಡುಕ, ಬಿಟ್ಟು ಬಿಟ್ಟು ಜ್ವರ ಬರುವುದು, ವಾಕರಿಕೆ, ಮೈ ಬೆವರುವುದು ಲಕ್ಷಣಗಳು ಕಂಡು ಬಂದಲ್ಲಿ ಮಲೇರಿಯಾ ಜ್ವರ ಇರಬಹುದು ಎಂದು ಭಾವಿಸಿ ಹತ್ತಿರದ ಸರ್ಕಾರಿ ಆಸ್ಪತ್ರೆಯಲ್ಲಿ ರಕ್ತ ಪರೀಕ್ಷೆಗೆ ಒಳಪಟ್ಟು ಸೂಕ್ತ ಉಚಿತ ಚಿಕಿತ್ಸೆ ಪಡೆಯಬೇಕು ಎಂದು ಹೇಳಿದರು.

ಮಲೇರಿಯಾ ಪ್ರಕರಣಗಳು ಕಂಡು ಬಂದ ಸಂದರ್ಭದಲ್ಲಿ ಮನೆಯ ಸುತ್ತಮುತ್ತಲು ಆರೋಗ್ಯ ಇಲಾಖೆಯಿಂದ ಕೈಗೊಳ್ಳುವ ಕೀಟನಾಶಕ ಸಿಂಪರಣೆಗೆ ಸಾರ್ವಜನಿಕರು ಅವಕಾಶ ಸಹಕರಿಸಬೇಕು. ಸ್ವಯಂ ರಕ್ಷಣಾ ಕ್ರಮಗಳಾದ ಮಲಗುವಾಗ ಸೊಳ್ಳೆ ಪರದೆ ಬಳಕೆ ಮಾಡಬೇಕು. ಕಿಟಕಿಗಳಿಗೆ ಸೊಳ್ಳೆಗಳು ನುಸುಳದಂತೆ ಜಾಲರಿ ಅಳವಡಿಸುವುದು. ಆರೋಗ್ಯ ಇಲಾಖೆಯಿಂದ ನೀಡಲ್ಪಡುವ ಲಾರ್ವಾಹಾರಿ ಗಪ್ಪಿ ಮತ್ತು ಗಂಬೂಷಿಯಾ ಮೀನುಗಳನ್ನು ಶಾಶ್ವತವಾಗಿ ನೀರು ನಿಲ್ಲುವ ಸ್ಥಳಗಳಲ್ಲಿ ಬಿಡಲು ಉಚಿತವಾಗಿ ಪಡೆಯಬಹುದಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿ ಡಾ.ವೀರೇಂದ್ರಕುಮಾರ್, ಜಿಲ್ಲಾ ವಿಬಿಡಿಸಿ ಸಮಾಲೋಚಕರಾದ ಪ್ರತಾಪ್. ಹೆಚ್., ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಶಕುಂತಲಾ ಮ್ಯಾಳಿ, ನಾಗರಾಜ, ರವೀಂದ್ರ ಜಿನಗ, ಆರೋಗ್ಯ ನಿರೀಕ್ಷಣಾಧಿಕಾರಿ ಮರಿಬಸವನಗೌಡ, ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿಗಳಾದ ಅಂಭುಜ, ನಂದಿನಿ, ಶಕುಂತಲಾ, ವಿಬಿಡಿಸಿ ಸಿಬ್ಬಂದಿ ವರ್ಗದವರು, ತಾಲೂಕು ಆರೋಗ್ಯಾಧಿಕಾರಿಗಳ ಸಿಬ್ಬಂದಿಗಳು ಹಾಗೂ ಮಲೇರಿಯಾ ಲಿಂಕ್ ವಾಲಂಟೀಯರ್ಸ್ ಮತ್ತು ಇತರೆ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಸಿಬ್ಬಂದಿಗಳು ಹಾಜರಿದ್ದರು.

ಜಾಗೃತಿ ಜಾಥವು ಬಳ್ಳಾರಿ ನಗರದ ಪ್ರಮುಖ ಬೀದಿಗಳಲ್ಲಿ ಹಾಗೂ ವಾರ್ಡ್‌ಗಳಲ್ಲಿ ಸಂಚರಿಸಿ ಸಾರ್ವಜನಿಕರಿಗೆ ಮಲೇರಿಯಾ ರೋಗದ ಕುರಿತು ಮಾಹಿತಿ ನೀಡಲಾಯಿತು.

## ಸುಪೋಷಿತ್ ಅಭಿಯಾನ: ಕಿನ್ನಾಳದಲ್ಲಿ ಬೀದಿ ನಾಟಕ ಪ್ರದರ್ಶನ



**■ ಹಂಪಿ ಟೈಮ್ಸ್ ಕೊಪ್ಪಳ**

ಕೇಂದ್ರ ಸರಕಾರ ಜಾರಿಗೆ ತಂದಿರುವ ಸುಪೋಷಿತ್ ಅಭಿಯಾನ ಕುರಿತು ಜನಸಾಮಾನ್ಯರಿಗೆ ಅರಿವು ಮೂಡಿಸುವ ಬೀದಿ ನಾಟಕ ಪ್ರದರ್ಶನವನ್ನು ಕೇಂದ್ರ ಸಂವಹನ ಇಲಾಖೆ ಬೆಂಗಳೂರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕೊಪ್ಪಳ ಇವರ ಆಶ್ರಯದಲ್ಲಿ ಕುಷ್ಟಗಿಯ ಜನ ಜಾಗೃತಿ ಕಲಾ ರಂಗ ಸಂಸ್ಥೆ ರಿ ಇವರಿಂದ ಕಿನ್ನಾಳ ಗ್ರಾಮದಲ್ಲಿ ನಡೆಸಲಾಯಿತು. ಕಾರ್ಯಕ್ರಮವನ್ನು ತಮಟೆ ಬಾರಿಸುವ ಮೂಲಕ ಮಹಿಳಾ ಮೇಲ್ವಿಚಾರಕಿಯರಾದ ಲಕ್ಷ್ಮಿ ದೇವಿ ರೆಡ್ಡಿ ಅವರು ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ಭಾರತ ಸರ್ಕಾರದ ಪ್ರಧಾನ ಮಂತ್ರಿಯವರು ಘೋಷಣೆ ಮಾಡಿದ ಸುಪೋಷಿತ್ ಗ್ರಾಮ ಪಂಚಾಯತ್ ಅಭಿಯಾನ ಯೋಜನೆಯು ಮುಖ್ಯವಾಗಿ ಆ ಪೌಷ್ಟಿಕತೆಯಿಂದ ಬಳಲುತ್ತಿರುವ ಗರ್ಭಿಣಿಯರು ಮಕ್ಕಳು ಬಾಣಂತಿಯರು ಅವರ ಆರೋಗ್ಯ ಸುಧಾರಣೆಗಾಗಿ ಜಾರಿಗೆ ತಂದಿರುವ ಮಹತ್ವವಾದ ಯೋಜನೆ ಆಗಿದೆ ಎಲ್ಲರೂ ಮಾಹಿತಿ ತಿಳಿದು ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಸದಸ್ಯರಾದ ಮಂಜುನಾಥ ಹುದ್ದಾರ್, ಅಂಗನವಾಡಿ ಕಾರ್ಯಕರ್ತೆಯರಾದ ಸಂತೋಷಿ ಮಾತಾ, ರೇಣುಕಾ ಜಾಲಿಹಾಳ್, ಭಾರತಿ ವಾಲ್ಮೀಕಿ, ಗೀತಾ, ಲಕ್ಷ್ಮಿ, ರೇಣುಕಾ ಬಂಡಿ ಇತರೆ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸ್ತ್ರೀ ಶಕ್ತಿ ಗುಂಪಿನ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಜಾಗೃತಿ: ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶರಣಪ್ಪ ವಡಿಗೇರಿ ಅವರ ನೇತೃತ್ವದಲ್ಲಿ ಯೋಜನೆಯ ಕುರಿತು ವಿವಿಧ ಸನ್ನಿವೇಶಗಳು, ಜಾಗೃತಿ ಗೀತೆಗಳು ಮೂಲಕ ಪ್ರದರ್ಶನ ನೀಡಿದ ಬೀದಿ ನಾಟಕವು ಜನಮನ ರಂಜನೆಯೊಂದಿಗೆ ಅರಿವು ಮೂಡಿಸಿ ಪ್ರದರ್ಶನ ನೀಡಿದರು.

## ಏ. ೩೦ ರಂದು ಕೊಪ್ಪಳದಲ್ಲಿ ಬಸವ ಜಯಂತ್ಯೋತ್ಸವ ಕಾರ್ಯಕ್ರಮ

**■ ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಪ್ಪಳ ನಗರಸಭೆ ಇವರ ಸಂಯುಕ್ತಾಶ್ರಯದಲ್ಲಿ ಬಸವ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಏಪ್ರಿಲ್ 30 ರಂದು ಸಂಜೆ 6 ಗಂಟೆಗೆ ನಗರದ ಶ್ರೀ ಗವಿಮಠದ ಆವರಣದಲ್ಲಿ ಆಯೋಜಿಸಲಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ತಂಗಡಗಿ ಶಿವರಾಜ ಸಂಗಪ್ಪ ಅವರು ಕಾರ್ಯಕ್ರಮ ಉದ್ಘಾಟಿಸುವರು. ಕರ್ನಾಟಕ ವಿಧಾನಸಭೆಯ ವಿರೋಧ ಪಕ್ಷದ ಮುಖ್ಯ ಸಚೇತಕರು ಹಾಗೂ ಕುಷ್ಟಗಿ ಶಾಸಕರಾದ ದೊಡ್ಡನಗೌಡ ಹನುಮಗೌಡ ಪಾಟೀಲ ಮತ್ತು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ಶಾಸಕರಾದ ಬಸವರಾಜ ರಾಯರಡ್ಡಿ ಅವರು ಘನ ಉಪಸ್ಥಿತಿ ವಹಿಸುವರು. ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರು ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಕೊಪ್ಪಳ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ಗಂಗಾವತಿ ಶಾಸಕರಾದ ಜಿ.ಜನಾರ್ಧನರೆಡ್ಡಿ, ವಿಧಾನ ಪರಿಷತ್ ಸದಸ್ಯರಾದ ಶಶೀಲ್ ಜಿ.ನಮೋಶಿ, ಡಾ.ಚಂದ್ರಶೇಖರ ಬಿ.ಪಾಟೀಲ, ಶರಣಗೌಡ ಅನ್ನದಾನಗೌಡ ಪಾಟೀಲ ಬಯ್ಯಾಪೂರ ಹಾಗೂ ಹೇಮಲತಾ ನಾಯಕ, ಮುನಿರಾಬಾದ್ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ತುಂಗಭದ್ರಾ ಯೋಜನೆಯ ಅಧ್ಯಕ್ಷರಾದ ಹಸನಸಾಬ ನಭಿಸಾಬ ದೋಟಿಹಾಳ, ಕೊಪ್ಪಳ ನಗರಸಭೆ ಅಧ್ಯಕ್ಷರಾದ ಅಮ್ಜದ್ ಪಟೇಲ್ ಮತ್ತು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀನಿವಾಸ್ ಗುಪ್ತಾ ಅವರು ಭಾಗವಹಿಸುವರು.

ವಿಶೇಷ ಆಹ್ವಾನಿತರಾಗಿ ಕೃಷ್ಣಭಾಗ್ಯ ಜಲ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಕೆ.ಪಿ ಮೋಹನ್ ರಾಜ್ ಅವರು ಭಾಗವಹಿಸುವರು. ಬೆಂಗಳೂರು ಬಸವ ಸಮಿತಿ ಅಧ್ಯಕ್ಷರಾದ ಅರವಿಂದ ಜತ್ತಿ ಅವರು ಜಗಜ್ಯೋತಿ ಬಸವೇಶ್ವರರ ಕುರಿತು ವಿಶೇಷ ಉಪನ್ಯಾಸ ನೀಡುವರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ನಲಿನ್ ಅತುಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್ ಅರಸಿದ್ದಿ ಅವರು ಉಪಸ್ಥಿತರಿರುವರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ್ ಮರಬನಳ್ಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕುರುಗೋಡು ಪುರಸಭೆ: ಅರ್ಜಿ ಆಹ್ವಾನ

**■ ಹಂಪಿ ಟೈಮ್ಸ್ ಕುರುಗೋಡು**

ಕುರುಗೋಡು ಪುರಸಭೆ ವ್ಯಾಪ್ತಿಯಲ್ಲಿ ಸ್ವಚ್ಛ ಭಾರತ ಮಿಷನ್ (ನ)–2.0 ಯೋಜನೆಯ ಐ.ಇ.ಸಿ ಘಟಕದಡಿ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ಕುರಿತು ನಗರ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ವಿವಿಧ ಬಗೆಯ ಐ.ಇ.ಸಿ ಚಟುವಟಿಕೆಗಳನ್ನು ಕೈಗೊಳ್ಳಲು ಅರ್ಹ ಸ್ವ–ಸಹಾಯ ಗುಂಪುಗಳ ಸದಸ್ಯರುಗಳ ನೇಮಕ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ.

**ಅರ್ಹತೆ:**

10ನೇ ತರಗತಿ/ತತ್ಸಮಾನ ಶಿಕ್ಷಣ ಹೊಂದಿರತಕ್ಕದ್ದು. ಅಭ್ಯರ್ಥಿಯು ಕನ್ನಡ ಮಾತನಾಡಲು ಹಾಗೂ ಬರೆಯಲು ತಿಳಿದಿರಬೇಕು. ಅರ್ಜಿ ಸಲ್ಲಿಸುವವರು ಸ್ವ–ಸಹಾಯ ಗುಂಪಿನಲ್ಲಿ ಕಾರ್ಯನಿರ್ವಹಿಸಿರುವ ಬಗ್ಗೆ ನಲ್ಮ್/ಭಾರತ/ಕರ್ನಾಟಕ ಸರ್ಕಾರದಿಂದ ಸೂಕ್ತ ದಾಖಲೆ ಹೊಂದಿರಬೇಕು. ಅರ್ಜಿದಾರರು ಕಂಪ್ಯೂಟರ್ ಸಾಕ್ಷರತೆಯ ಎಮ್.ಎಸ್.ಆಫೀಸ್, ಎಮ್.ಎಸ್. ಎಕ್ಸ್‌ಎಲ್ ನಿರ್ವಹಿಸುವ ಬಗ್ಗೆ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಪರಿಣಿತರಾಗಿರಬೇಕು. ಮಾಹಿತಿ ಶಿಕ್ಷಣ ಮತ್ತು ಸಂವಹನದಡಿ ಗ್ರಾಮ ಪಂಚಾಯಿತಿ ಅಥವಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿರುವ ಅನುಭವವುಳ್ಳ ಅಭ್ಯರ್ಥಿಗಳಿಗೆ ಆದ್ಯತೆಯ ಮೇರೆಗೆ ಆಯ್ಕೆ ಮಾಡಲಾಗುವುದು.

ಈ ಮೇಲಿನ ಎಲ್ಲಾ ದಾಖಲೆ ಮತ್ತು ಅನುಭವವುಳ್ಳ ಅಭ್ಯರ್ಥಿಗಳಿದ್ದಲ್ಲಿ ಕುರುಗೋಡು ಪುರಸಭೆ ಕಚೇರಿಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿಗಳನ್ನು ಮೇ 04 ರ ಬೆಳಿಗ್ಗೆ 08 ಗಂಟೆಯಿಂದ ಮಧ್ಯಾಹ್ನ 01.30 ರವರೆಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕುರುಗೋಡು ಪುರಸಭೆ ಕಚೇರಿಗೆ ಸಂಪರ್ಕಿಸಬಹುದು ಎಂದು ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



Grow Your Business With Us
S.M.Traders & Services
Authorised Distributor for ATLAS COPCO Portable Screw Air Compressors
for North Karnataka
Water Well and Non Water Well Applications
web: www.smtradersandservices.com
M: 9686663125 - 9686663132
Atlas Copco
Head Office- Hospet, Vijayanagara district, Karnataka | Branch office 1- Ilkal, Bagalkot district, Karnataka | Branch office 2- Vijayapura, Karnataka


# ಉಗ್ರರ ಅಟ್ಟಹಾಸ ಖಂಡಿಸಿ ಮುಸ್ಲಿಂರಿಂದ ಪ್ರತಿಭಟನೆ

## ಕೊಟ್ಟೂರಿನಲ್ಲಿ ಮೇಣದ ಬತ್ತಿ ಹಚ್ಚಿ ಮೃತಪಟ್ಟ ಭಾರತೀಯ ಪ್ರವಾಸಿಗರ ಆತ್ಮಕ್ಕೆ ಶ್ರದ್ಧಾಂಜಲಿ ಸಲ್ಲಿಸಿದ ಮುಸ್ಲಿಂರು

## ಭ್ರಾತೃತ್ವಕ್ಕೆ ಧಕ್ಕೆ ತಂದ ಉಗ್ರರನ್ನ ಸೆದೆಬಡಿಯಲು ಮುಸ್ಲಿಂರಿಂದ ಕೇಂದ್ರ ಸರ್ಕಾರಕ್ಕೆ, ಯೋಧರಿಗೆ ಬೆಂಬಲ




■ **ಹಂಪಿ ಟೈಮ್ಸ್ ಕೊಟ್ಟೂರು.**
ಪಟ್ಟಣದ ಮುಸ್ಲೀಮ್ ಸಂಮುದಾಯವು ಪಹಲ್ಗಾಮನಲ್ಲಿ ಉಗ್ರರ ಅಟ್ಟಹಾಸ ಖಂಡಿಸಿ ಪ್ರತಿಭಟಿಸಿ, ಮೃತಪಟ್ಟ ಪ್ರವಾಸಿಗರ ಆತ್ಮಕ್ಕೆ ಶ್ರದ್ಧಾಂಜಲಿ ಸಲ್ಲಿಸಿದರು.

ಶುಕ್ರವಾರ ಸಂಜೆ ಉಜ್ಜಿನಿ ಸರ್ಕಲ್‌ನಲ್ಲಿ ನೂರಾರು ಮುಸ್ಲೀಮ್ ಯುವಕರು, ಮುಖಂಡರು ಮೇಣದ ಬತ್ತಿ ಹಚ್ಚಿ ಸಂತಾಪ ಸೂಚಿಸುವ ಮೂಲಕ ಮೃತರ ಆತ್ಮಕ್ಕೆ ಶಾಂತಿ ಕೋರಿದರು.

ಪಟ್ಟಣ ಪಂಚಾಯಿತಿ ನಿವೃತ್ತ ಮುಖ್ಯಾಧಿಕಾರಿ ನೂರುಲ್ ಖಾನ್ ಮಾತನಾಡಿ, "ಭಾರತೀಯರು ನಾವು ಎಂದೇಂದೂ ಒಂದೆ" ಪಹಲ್ಗಾಮನಲ್ಲಿ ಉಗ್ರರು ಧರ್ಮದ ಆಧಾರದ ಮೇಲೆ ದೃಷ್ಕೃತ್ಯ ಎಸಗಿ ನಮ್ಮಲ್ಲಿನ ಬ್ರಾತೃತ್ವಕ್ಕೆ ಧಕ್ಕೆ ತಂದಿದ್ದಾರೆ. ಈ ಕೃತ್ಯವನ್ನು ಖಂಡಿಸುತ್ತೇವೆ. ಕೇಂದ್ರ ಸರ್ಕಾರವು ಉಗ್ರರು ಎಲ್ಲೇ ಅಡಗಿರಲಿ ಅವರನ್ನು ಪತ್ತೆ ಹಚ್ಚಿ ಸೂಕ್ತ ಶಿಕ್ಷೆ ನೀಡಬೇಕು. ಅದಕ್ಕೆ ಸೂಚಕರನ್ನು ಶಿಕ್ಷಿಸಬೇಕೆಂದರು, ಪ್ರತಿಯೊಬ್ಬ ಭಾರತೀಯ ಮುಸಲ್ಮಾನ್ ಇದಕ್ಕೆ ಬೆಂಬಲ ಸೂಚಿಸುತ್ತೆ, ಅಲ್ಲದೆ ದೇಶದಲ್ಲಿ ಉಗ್ರರಿದ್ದರೆ ಅವರನ್ನು ಕೂಡಾ ಪತ್ತೆ ಹಚ್ಚಿ ಶಿಕ್ಷೆ ನೀಡಬೇಕು, ಭಾರತೀಯ ಯೋಧರ ಶಕ್ತಿ ತೋರಿಸಬೇಕೆಂದು ಒತ್ತಾಯಿಸಿದರು.

ಬೆಣ್ಣಿ ಪ್ರಭು ಮಾತನಾಡಿ, ಉಗ್ರರ ದುಷ್ಕೃತ್ಯ ಅಮಾನವೀಯ. ಈ ಕೃತ್ಯವನ್ನು ಯಾವ್ವೊಬ್ಬ ಭಾರತೀಯ ಮುಸಲ್ಮಾನರು ಸಹಿಸರು, ಈ ದುಷ್ಕೃತ್ಯಕ್ಕೆ ಕಾರಣರಾದ ಪಾಕಿಸ್ತಾನಿಗಳಿಗೆ ಭಾರತದ ಶಕ್ತಿ ತೋರಿಸುವ ಸಮಯ ಬಂದಿದೆ. ಕೇಂದ್ರ ಸರ್ಕಾರ ಮತ್ತು ಯೋಧರು ಮುನ್ನಗ್ಗಲಿ. ನಾವು ಬೆಂಬಲಿಸುವೆವು ಎಂದು ಸಮಸ್ತ ಮುಸಲ್ಮಾನ ಇಚ್ಛೆಯನ್ನು ವ್ಯಕ್ತಪಡಿಸಿದರು.


ಈ ವೇಳೆ ಪಟ್ಟಣ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಹಾಗೂ ಹಾಲಿ ಸದಸ್ಯ ಶಫೀ, ಆಜಿ ಸಲೀಮ್ ಸಾಹೇಬ್, ಆಜೀ ಅಹೀಬ್ ಸಾಹೇಬ್, ಮೌಲ್ವಿ ಯಾಸಿನ್, ಆಜೀ ರಾಮತುಲ್ ಸಾಹೇಬ್, ಆಜೀ ಅಲ್ಲಾಬಕ್ಷಿ, ಬ್ಲೂಟ್ ಮೂಸಾ ಸಾಹೇಬ್, ಬಾಗಳಿ ಬಾಷಾ ಸಾಹೇಬ್, ಕೆ.ನಜೀರ ಸಾಹೇಬ್, ಬುಡೇನ್ ಸಾಹೇಬ್ ಕೋಡಿಹಳ್ಳಿ, ಪಳಾರದ ಅಂಗಡಿ ಮಂಜುನಾಥ ಸೇರಿದಂತೆ ನೂರಾರು ಮುಸಲ್ಮಾನ್ ಯುವಕರು, ಮುಖಂಡರು ಇತರರಿದ್ದರು.

## ಉಗ್ರರ ದಾಳಿ ಖಂಡಿಸಿದ ಹೊಸಪೇಟೆ ಬಾರ್ ಅಸೋಷಿಯೇಷನ್




ಹೊಸಪೇಟೆ ಬಾರ್ ಅಸೋಸಿಯೇಷನ್ ವತಿಯಿಂದ ವಕೀಲರು ನ್ಯಾಯಾಲಯದ ಆವರಣಲದಲ್ಲಿ ಪಹಲ್ಗಾಮನಲ್ಲಿನ ಉಗ್ರರ ದಾಳಿಯನ್ನು ಖಂಡಿಸಿದರು. ದಾಳಿಯಲ್ಲಿ ಮೃತರ ಆತ್ಮಕ್ಕೆ ಶಾಂತಿ ಕೋರಿ ಶ್ರದ್ಧಾಂಜಲಿ ಸಲ್ಲಿಸಿದರು. ವಕೀಲರ ಸಂಘದ ಅಧ್ಯಕ್ಷ ಪ್ರಹ್ಲಾದ, ಹಿರಿಯ ವಕೀಲರಾದ ಚಂದ್ರಶೇಖರ ಪಿ ಯಲಗೋಡ, ತಾರಿಹಳ್ಳಿ ಹನುಮಂತಪ್ಪ, ಜಂಬಯ್ಯ, ಮಹೇಶ್, ದಯಾನಂದ, ಸೌದಾಗರ್, ಮಂಜುನಾಥ ಸೇರಿದಂತೆ ಅನೇಕರು ಇದ್ದರು.

## ಪಹಲ್ಗಾಮ್‌ದಲ್ಲಿ ಉಗ್ರರ ದಾಳಿ ಖಂಡನೆ: ಶ್ರದ್ಧಾಂಜಲಿ




ಉಗ್ರರ ದಾಳಿಯಲ್ಲಿ ಮೃತಪಟ್ಟ ಪ್ರವಾಸಿಗರಿಗೆ ವಿಜಯನಗರ ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ಶುಕ್ರವಾರ ಸಂಜೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಹುಡಾ ಅಧ್ಯಕ್ಷ ಎಚ್.ಎನ್.ಮಹ್ಮದ್ ಇಮಾಮ್ ನಿಯಾಜಿ, ಕೆ.ಎಂ.ಹಾಲಪ್ಪ, ಕಾರ್ಯಕರ್ತರು, ಇತರರಿದ್ದರು.

## ಮೈಕ್ರೋ ನ್ಯೂಸ್

### ಕಮ್ಯುನಿಟಿ ಮೊಬಲೈಜರ್ ಹುದ್ದೆ ನೇಮಕಾತಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**
ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸ್ವಚ್ಛಭಾರತ್ ಮಿಷನ್ 2.0 ಯೋಜನೆಯಡಿಯಲ್ಲಿ ಐಇಸಿ ಚಟುವಟಿಕೆಗಳ ನಿರ್ವಹಣೆಗೆ ಸ್ವಸಹಾಯ ಮಹಿಳಾ ಸದಸ್ಯರನ್ನು ಕಮ್ಯುನಿಟಿ ಮೊಬಲೈಜರ್ ಹುದ್ದೆಗೆ ಅಸಕ್ತ ಮಹಿಳಾ ಸದಸ್ಯರ ನೇಮಕಾತಿಗೆ ಅರ್ಜಿ ಅಹ್ವಾನಿಸಲಾಗಿದೆ ಎಂದು ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಮನೋಹರ್ ತಿಳಿಸಿದ್ದಾರೆ.

ಜಿಲ್ಲೆಯ ಹೊಸಪೇಟೆ ನಗರಸಭೆ, ಹರಪನಹಳ್ಳಿ, ಹಗರಿಬೊಮ್ಮನಹಳ್ಳಿ, ಹೂವಿನಹಡಗಲಿ ಪುರಸಭೆ, ಕಮಲಾಪುರ, ಕೂಡ್ಲಿಗಿ, ಕೊಟ್ಟೂರು ಮತ್ತು ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿರುವ ನಲ್ಮ್-ಡೇ ಯೋಜನೆಯಡಿ ನೋಂದಾಯಿತ ಸ್ವಸಹಾಯ ಮಹಿಳಾ ಗುಂಪು ಸದಸ್ಯರಿಂದ ಮೂರು ವರ್ಷಗಳ ಪೂರ್ಣಾವಧಿಗೆ ಐಇಸಿ ಚಟುವಟಿಕೆಗಳನ್ನು ನಿರ್ವಹಿಸಲು ಆಸಕ್ತಿ ಹೊಂದಿರುವ 'ಕಮ್ಯುನಿಟಿ ಮೊಬಲೈಜರ್' ಹುದ್ದೆಗೆ ಆಯ್ಕೆ ಪ್ರಕ್ರಿಯೆ ಮತ್ತು ಗೌರವಧನ ಇತರೆ ಮಾಹಿತಿಗಾಗಿ ಆಯಾ ನಗರ ಸ್ಥಳೀಯ ಸಂಸ್ಥೆಗಳಪೌರಾಯುಕ್ತರು,ಮುಖ್ಯಾಧಿಕಾರಿಗಳನ್ನು ಸಂಪರ್ಕಿಸಿ, ಕಚೇರಿಯಲ್ಲಿ ಲಭ್ಯವಿರುವ ನಿಗಧಿತ ಅರ್ಜಿ ನಮೂನೆಯೊಂದಿಗೆ ಗುರುತಿನ ಪುರಾವೆ ವಿಳಾಸದ ಪುರಾವೆ, ನಲ್ಮ್-ಡೇ ಅಡಿ ಮಹಿಳಾ ಸ್ವಸಹಾಯ ಗುಂಪು ನೋಂದಾಯಿಸಿಕೊಂಡಿರುವ (ಎಂಪೆನಾಲ್) ದಾಖಲೆಗಳು, ಶೈಕ್ಷಣಿಕ ಅರ್ಹತೆ ದಾಖಲಾತಿಗಳು, ನಲ್ಮ್-ಡೇ ರಿಂದ ಹಿಂಬರಹದ ನಮೂನೆಗಳನ್ನು ಲಗತ್ತಿಸಿ ಮೇ.12 ರ ಸಂಜೆ 5 ಗಂಟೆಯೊಳಗೆ ಖುದ್ದಾಗಿ ಸಲ್ಲಿಸಬೇಕು. ಅರ್ಹ ಅಭ್ಯರ್ಥಿಗಳ ಆಸಕ್ತಿ, ಜ್ಞಾನ ಕೌಶಲ್ಯ, ಮಾಹಿತಿಯ ಕುರಿತು ಸಂದರ್ಶನದ ಮೂಲಕ ಆಯ್ಕೆ ಪ್ರಕ್ರಿಯೆಯಯನ್ನು ಪೂರ್ಣಗೊಳಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಚಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
HAMPI TIMES VIJAYANAGARA
Only Admins can Send Messages to this Group
Join with Us


## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ವಿಶ್ವಾವಸು

**26-04-2025 - ಶನಿವಾರ**

| | |
|---|---|
| ತಿಥಿ | : ತ್ರಯೋದಶಿ/ಚತುರ್ದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಉ.ಭಾದ್ರಪದ/ರೇವತಿ |
| ಯೋಗ | : ವೈಧೃತಿ |
| ಕರಣ | : ವಿಷ್ಕುಂಭ |
| ಸೂರ್ಯೋದಯ | : 05:58:33 |
| ಸೂರ್ಯಾಸ್ತ | : 18:51:08 |
| ರಾಹು ಕಾಲ | : 09:12-10:48 |
| ಯಮಘಂಡ ಕಾಲ | : 14:01-15:38 |
| ಗುಳಿಕ ಕಾಲ | : 05:59-07:35 |



## ತುಂಗಭದ್ರಾ ನೀರಿನ ಮಟ್ಟ

ಶುಕ್ರವಾರ : 25-04-2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1584.29 ಅಡಿ |
| ಒಳ ಹರಿವು | 442 ಕ್ಯುಸೆಕ್ |
| ಹೊರ ಹರಿವು | 327 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 6.871 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1578.44 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 67 ಕ್ಯುಸೆಕ್ |
| ಸಾಮರ್ಥ್ಯ | 3.761 ಟಿಎಂಸಿ |

# ಡಾ.ಬಿ.ಆರ್.ಅಂಬೇಡ್ಕರ್ ಮಹಾಮಾನವತಾವಾದಿ

## ಅಂಬೇಡ್ಕರ್ ಸ್ವಾಭಿಮಾನಿ ಸೇನೆಯ ತಾಲೂಕು ಪ್ರಧಾನ ಕಾರ್ಯದರ್ಶಿ ಎ.ಮಂಜು ನಾಥ್ ಹೇಳಿಕೆ




■ **ಹಂಪಿ ಟೈಮ್ಸ್ ಹರಪನಹಳ್ಳಿ**
ವಿವಿಧ ಸಂಸ್ಕೃತಿ, ಧರ್ಮದವರು ನೆಲೆಸಿರುವ ಭಾರತ ದೇಶಕ್ಕೆ ಸಮರ್ಥ ವಾದ ಸಂವಿಧಾನವನ್ನು ಅಂಬೇಡ್ಕರ್ ನೀಡಿದ್ದಾರೆ' ಎಂದು ತಾಲೂಕು ಅಂಬೇಡ್ಕರ್ ಸ್ವಾಭಿಮಾನಿ ಸೇನೆಯ ಪ್ರಧಾನ ಕಾರ್ಯದರ್ಶಿ ಎ.ಮಂಜು ನಾಥ್ ಹೇಳಿದರು.

ತಾಲೂಕಿನ ಮತ್ತಿಹಳ್ಳಿ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸ್ವಾಭಿ ಮಾನಿ ಸೇನೆಯ ವತಿಯಿಂದ ಶುಕ್ರವಾರ ಡಾ.ಬಿ.ಆರ್.ಅಂಬೇಡ್ಕರ್ ರವರ 134 ನೇ ಜಯಂತಿಯಲ್ಲಿ ಅವರು ಮಾತನಾಡಿ, ಅಂಬೇಡ್ಕರ್ ದೇಶದ ಆಸ್ತಿ. ಅವರ ಮಾದರಿ ಬದುಕು, ತತ್ವ, ಚಿಂತನೆಗಳು ಪ್ರತಿ ಯೊಬ್ಬರಿಗೂ ಮಾದರಿಯಾಗಿದೆ. 'ಅಂಬೇಡ್ಕರ್ ಅವರು ದೇಶ ಕಂಡ ಮಹಾನ್ ಮಾನವತಾವಾದಿ' ಯಾಗಿದ್ದಾರೆ. ಪ್ರತಿ ಕುಟುಂಬದಲ್ಲಿ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಿದಾಗ ಅವರ ಕನಸು ನನಸಲಾಗಲಿದೆ ಎಂಬುದನ್ನು ಪ್ರತಿಯೊಬ್ಬರು ಮೊದಲು ಅರಿಯಬೇಕು ಎಂದರು.

ತಾಲೂಕಿನ ಮತ್ತಿಹಳ್ಳಿ ಗ್ರಾಮದಲ್ಲಿ ಅಂಬೇಡ್ಕರ್ ಅಭಿಮಾನಿ ಸೇನೆಯ ವತಿಯಿಂದ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡುವ ಮೂಲಕ ಆಚರಿಸಲಾಯಿತು.

ತಾಲೂಕು ಪ್ರಧಾನ ಕಾರ್ಯದರ್ಶಿ ಗಳಾದ ಮಂಜುನಾಥ್ ಮತ್ತು ಇವರ ನೇತೃತ್ವದಲ್ಲಿ ಅದ್ದೂರಿ ಯಾಗಿ ಜರುಗಿತು. ಅಂಬೇಡ್ಕರ್ ಅಭಿಮಾನಿ ಸೇನೆಯ ತಾಲೂಕು ಪ್ರಧಾನ ಕಾರ್ಯದರ್ಶಿ ಮಂಜುನಾಥ, ಪಿ.ಅಂಜಿನಪ್ಪ, ಪ್ರಭು, ರಾಜಪ್ಪ, ಲಂಕೇಶ್, ಪ್ರಕಾಶ್, ಕೊಟ್ರಪ್ಪ, ಅರುಣ, ಶಶಿ, ಮಾಂತೇಶ, ಎಸ್. ಮಂಜುನಾಥ ಹಾಗೂ ಇತರರಿದ್ದರು.

# ಸಂಡೂರು ಪುರಸಭೆ: ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಸಂಡೂರು**
ಸಂಡೂರು ಪುರಸಭೆ ವ್ಯಾಪ್ತಿಯಲ್ಲಿ ಸ್ವಚ್ಛ ಭಾರತ್ ಮಿಷನ್ 2.0 ರಡಿ ಐಇಸಿ ಚಟುವಟಿಕೆ ಕೈಗೊಳ್ಳಲು ಸ್ವಸಹಾಯ ಗುಂಪು ಸದಸ್ಯರ ನೇಮಕಾತಿಗಾಗಿ ಆಸಕ್ತಿಯುಳ್ಳ ಸದಸ್ಯರಿಂದ ಅರ್ಜಿ ಆಹ್ವಾನಿಸಲಾಗಿದೆ.

ಸಂಡೂರು ಪುರಸಭೆ ವ್ಯಾಪ್ತಿಯಲ್ಲಿ 03 ವರ್ಷಗಳವರೆಗೆ ಪೂರ್ಣಾವಧಿಗೆ ಐಇಸಿ ಚಟುವಟಿಕೆ ಕೈಗೊಳ್ಳಲು ಆಸಕ್ತಿ ಹೊಂದಿರುವ ನಲ್ಮ್ ಡೇ ಅಥವಾ ಎನ್‌ಆರ್‌ಎಲ್‌ಎಂ ಅಡಿ ನೋಂದಾಯಿತ ಸ್ವ-ಸಹಾಯ ಗುಂಪು ಸದಸ್ಯರು ನಿಗಧಿತ ದಾಖಲಾತಿಗಳೊಂದಿಗೆ ಸಂಡೂರು ಪುರಸಭೆ ಕಚೇರಿಗೆ ಮೇ 03 ರೊಳಗೆ ಅರ್ಜಿ ಸಲ್ಲಿಸಬಹುದು.

ಸ್ವಚ್ಚ ಭಾರತ್ ಮಿಷನ್ ನ ಅರಿವು ಮೂಡಿಸುವ ಕಾರ್ಯಕ್ರಮಗಳಲ್ಲಿರುವ ಆಸಕ್ತಿ, ಜ್ಞಾನಕೌಶಲ್ಯ, ಕಂಪ್ಯೂಟರ ಜ್ಞಾನ ಮತ್ತು ಮಾಹಿತಿಯ ಕುರಿತು ನಿರ್ಣಯಿಸಲು ಜಿಲ್ಲಾ ಮಟ್ಟದಲ್ಲಿ ಸಂದರ್ಶನವನ್ನು ಆಯೋಜಿಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

ಆಯ್ಕೆ ಪ್ರಕ್ರಿಯೆ ಮತ್ತು ಗೌರವಧನಕ್ಕೆ ಸಂಬಂಧಿಸಿದ ಇತರೆ ವಿವರಗಳಿಗಾಗಿ ಸಂಡೂರು ಪುರಸಭೆಯ ಪರಿಸರ ಅಭಿಯಂತರ ಕಚೇರಿ ಅಥವಾ ದೂ.08395-260275 ಗೆ ಸಂಪರ್ಕಿಸಬಹುದು ಎಂದು ಸಂಡೂರು ಪುರಸಭೆಯ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಿ

**ಮೊದಲ ಪುಟದಿಂದ**
ವಿಚಾರಗಳನ್ನು, ಆಶಯಗಳನ್ನು, ಪ್ರತಿಯೊಬ್ಬರ ಮನೆಗಳಿಗೆ ಮತ್ತು ಮನಸ್ಸುಗಳಿಗೆ ನಾವೆಲ್ಲರೂ ಕೊಂಡಯ್ಯಬೇಕು. ಬುದ್ಧ ಬಸವಣ್ಣನವರ ಆಶಯಗಳನ್ನು ಬಾಬಾ ಸಾಹೇಬ್ ಅಂಬೇಡ್ಕರ್ ರವರು 1950 ಜನವರಿ 26 ರಂದು ಜಾರಿಯಾದ ಸಂವಿಧಾನದಲ್ಲಿ ಭಾರತೀಯರೆಲ್ಲರಿಗೂ ಶಿಕ್ಷಣದ ಹಕ್ಕು ಉದ್ಯೋಗದ ಹಕ್ಕು ಮತದಾನದ ಹಕ್ಕು ಮಹಿಳೆಯರೆಲ್ಲರಿಗೂ ವಿಶೇಷ ಹಕ್ಕುಗಳು, ಮೂಲಭೂತ ಹಕ್ಕುಗಳು, ಮೂಲಭೂತ ಕರ್ತವ್ಯಗಳು, ರಾಜ್ಯನೀತಿ ನಿರ್ದೇಶಕ ತತ್ವಗಳು ನೀಡುವುದರ ಮೂಲಕ ದೇಶದ ಎಲ್ಲ ನಾಗರಿಕರಿಗೆ ಸ್ವಾತಂತ್ರ್ಯ, ಸಮಾನತೆ ಯಿಂದ ಬದುಕಲು ಸಂವಿಧಾನ ಮೂಲಕ ಸುಭದ್ರವಾದ ಬುನಾದಿ ಹಾಕಿಕೊಟ್ಟ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ನಾವೆಲ್ಲರೂ ಸ್ಮರಿಸಬೇಕು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಸಂಘಟನಾ ಸಂಚಾಲಕ ದುರುಗೇಶ್ ಬಿ.ಟಿ ಗುದ್ದಿ, ತಾಲೂಕು ಸಂಚಾಲಕ ಟಿ ಗಂಗಾಧರ್ ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಾದ ಡಿ.ಎಂ ಈಶ್ವರಪ್ಪ ಸಿದ್ದಾಪುರ, ಎಚ್ ದುರ್ಗಪ್ಪ ಕಾನಾಮಡಗು, ತಾಲೂಕು ಸಂಘಟನಾ ಸಂಚಾಲಕರಾದ ಎನ್ ಫಕೀರಪ್ಪ ಕಾನಮಡಗು, ಮಹೇಶ ಕೂಡ್ಲಿಗಿ, ಮೂಗಪ್ಪ, ಅಜಯ್, ಕೃಷ್ಣಮೂರ್ತಿ ಬಿ. ಹಿರಿಯ ಪತ್ರಕರ್ತರು, ಊರಿನ ಮುಖಂಡರುಗಳಾದ ರಾಜಶೇಖರ್, ಕಾಂಗ್ರೆಸ್ ಮುಖಂಡ ಬೋಸೆ ಮಲ್ಲಯ್ಯ, ಕಾಂಗ್ರೆಸ್ ಮುಖಂಡ ಬಗ್ಲರ್ ಪಾಪಣ್ಣ, ಫುಲಯ್ಯ, ಚಿನ್ನಯ್ಯ, ತೌಡಯ್ಯರ ಬೋರಯ್ಯ, ಗ್ರಂಥಪಾಲಕರು ಟಿ ಗುರುರಾಜ್, ಬಿಜೆಪಿ ಯುವ ಮುಖಂಡ ಸುರೇಶ್, ಚೌವಡಿ ನಾಗಣ್ಣ, ಹಟ್ಟಿಯ ದಲಿತ ಮುಖಂಡರು ಡಿ ಚಂದ್ರಪ್ಪ, ದುರ್ಗಪ್ಪ, ಗೊಡ್ಡೆಪ್ಪರ ನಾಗರಾಜ್, ಬೋಸಣ್ಣ, ತಲಾರಿ ತಿಪ್ಪೇಸ್ವಾಮಿ, ಕೆಂಚಣ್ಣ, ಬಿ ಬಸಣ್ಣ, ತಲಾರಿ ಹಂಪಣ್ಣ, ಮಲ್ಲಜ್ಜರ್ ಚೌಡಪ್ಪ ಸೇರಿದಂತೆ ಗ್ರಾ.ಪಂ ಸರ್ವ ಸದಸ್ಯರು, ಮುಖಂಡರು ದಲಿತ ಸೇನೆಯ ಯುವಕರು ಇತರರು ಇದ್ದರು.

ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರ ದೊಂದಿಗೆ ಮುಖ್ಯ ರಸ್ತೆಗಳಲ್ಲಿ ಡಿಜೆ ಸೌಂಡ್‌ಗೆ ಪ್ರಮುಖರು, ಯುವಕರು, ಮಹಿಳೆಯರು ಹೆಜ್ಜೆ ಹಾಕಿ ಮೆರವಣಿಗೆ ವೈಭವ ಹೆಚ್ಚಿಸಿದರು. ಕಾನ ಹೊಸಹಳ್ಳಿ ಠಾಣೆ ಪೊಲೀಸರು ಸೂಕ್ತ ಬಂದೋಬಸ್ತ್ ಕಲ್ಪಿಸಿದ್ದರು.


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
E-PAPER USER ENGAGEMENT
1,70,000+
Scan to read epaper

HAMPI TIMES Print & Digital Edition
Searching for the perfect platform to promote your brand?
Want to reach more people? Choose HAMPI TIMES
Contact : 94486 33038
E-mail: hampitimes@gmail.com
www.hampitimes.com